# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 Volume:02 • ಸಂಚಿಕೆ: 176 Issue: 176 • ಪಿ.ಆರ್.ಜಿ.ಐ.ನಂ.:KARKAN/2023/88055 PRGI No:KARKAN/2023/88055 • ವಿಜಯನಗರ VIJAYANAGARA • 14.01.2025 • ಮಂಗಳವಾರ Tuesday • ಪುಟ:04 Page:04 • ಬೆಲೆ:2 Rs:2



BOOK YOUR ADVERTISEMENTS TO REACH MORE READERS
1,00,000+
Digital E-PAPER READERS
M: 94486 33038
Book Advance Get More Benefits
HAMPI TIMES No.1 LEADING VIJAYANAGARA District News Paper



ಮನಸ್ಸು ಮಾಡು ಕರ್ತವ್ಯ ನಿಷ್ಠನಾಗು ಕಾದು ನೋಡು

ಈ ಬಾರಿ SSLC ವಿದ್ಯಾರ್ಥಿಗಳಿಗೆ ಸುವರ್ಣಾವಕಾಶ!

ವಿದ್ಯಾರ್ಥಿಗಳು ಹೆಚ್ಚು ಅಂಕಗಳಿಸಲು ಸುಲಭ ಮಾರ್ಗೋಪಾಯಗಳು ದಿನಕ್ಕೊಂದು ವಿಷಯ ಹಂಪಿ ಟೈಮ್ಸ್ ಮಾರ್ಗದರ್ಶಿಯಲ್ಲಿ

SSLC ಪರೀಕ್ಷೆ ವಂಚಿತರು, ಆಕಾಂಕ್ಷಿಗಳು ಹಂಪಿ ಟೈಮ್ಸ್ ದಿನಪತ್ರಿಕೆಯಲ್ಲಿನ ದಿನಕ್ಕೊಂದು ವಿಷಯಗಳನ್ನು ಓದಿಕೊಂಡು ಪರೀಕ್ಷೆಗೆ ಸಿದ್ಧಗೊಳ್ಳಲು ಹಂಪಿ ಟೈಮ್ಸ್ ಮಾರ್ಗದರ್ಶಿ ಸಹಕಾರಿಯಾಗಲಿದೆ... ಇ-ಪೇಪರ್‌ನಲ್ಲೂ ಲಭ್ಯ...

ಹಂಪಿ ಟೈಮ್ಸ್ ಇ-ಪೇಪರ್

94486 33038 | www.hampitimes.com / epaper.hampitimes.com | Vijayanagara | hampitimes@gmail.com


ಪುಟ: 3ರಲ್ಲಿ ನೋಡಿ

## ಮೈಕ್ರೋ ನ್ಯೂಸ್

### ಜ.20 ರಂದು ದಿಶಾ ಸಮಿತಿ ಸಭೆ, ಸಾರ್ವಜನಿಕರಿಂದ ಅಹವಾಲು ಸ್ವೀಕಾರ

**ಹಂಪಿ ಟೈಮ್ಸ್ ಹೊಸಪೇಟೆ**

ಜಿಲ್ಲಾ ಅಭಿವೃದ್ಧಿ ಸಮನ್ವಯ ಮತ್ತು ಉಸ್ತುವಾರಿ ಸಮಿತಿ (ದಿಶಾ) ಸಭೆಯನ್ನು ಜ.20 ರಂದು ಹಗರಿಬೊಮ್ಮನಹಳ್ಳಿ ತಾಪಂ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ನೋಂಗ್ಜಾಯ ಮೋಹಮ್ಮದ್ ಅಲಿ ಅಕ್ರಮ್ ಷಾ ತಿಳಿಸಿದ್ದಾರೆ.

ಸಂಸದರಾದ ಇ.ತುಕಾರಾಂರವರ ಅಧ್ಯಕ್ಷತೆಯಲ್ಲಿ ಸಭೆ ಜರುಗಲಿದ್ದು, ದಿಶಾ ಸಭೆಯ ಪೂರ್ವದಲ್ಲಿ ಸಂಸದರು ಬೆ.10 ರಿಂದ 11 ಗಂಟೆಯವರೆಗೆ ಹಗರಿಬೊಮ್ಮನಹಳ್ಳಿ ಪಟ್ಟಣದ ಪುರಸಭೆ ಮುಂಭಾಗದಲ್ಲಿ ಸಾರ್ವಜನಿಕರಿಂದ ಅಹವಾಲುಗಳನ್ನು ಸ್ವೀಕರಿಸಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಜ.18 ರಂದು ಬಳ್ಳಾರಿ ಜಿಲ್ಲೆಯ ಬಾಕಿ ಇರುವ ದೂರುಗಳ ವಿಚಾರಣೆ ಸಭೆ

**ಹಂಪಿ ಟೈಮ್ಸ್ ಬಳ್ಳಾರಿ**

ಬಳ್ಳಾರಿ ಜಿಲ್ಲೆಯ ಬಾಕಿ ಇರುವ ದೂರುಗಳ ವಿಚಾರಣೆ ಹಾಗೂ ಪ್ರಕರಣಗಳ ವಿಲೇವಾರಿ ಸಭೆಯನ್ನು ಜ.18 ರಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 1.30 ಗಂಟೆಯವರೆಗೆ ಮತ್ತು ಮಧ್ಯಾಹ್ನ 2.30 ರಿಂದ ಸಂಜೆ 5 ಗಂಟೆಯವರೆಗೆ ನಗರದ ಡಾ.ಜೋಳದರಾಶಿ ದೊಡ್ಡನಗೌಡ ರಂಗಮಂದಿರದಲ್ಲಿ ಆಯೋಜಿಸಲಾಗಿದೆ.

ಕರ್ನಾಟಕ ಲೋಕಾಯುಕ್ತದ ಉಪಲೋಕಾಯುಕ್ತ ನ್ಯಾಯಮೂರ್ತಿಗಳಾದ ಬಿ.ವೀರಪ್ಪ ಅವರು ಸಭೆಯನ್ನು ಉದ್ಘಾಟನೆ ಮಾಡುವರು. ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಅಧ್ಯಕ್ಷತೆ ವಹಿಸುವರು.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರೂ ಆದ ಕೆ.ಜಿ.ಶಾಂತಿ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶರಣಪ್ಪ ಸಂಕನೂರ, ಜಿಲ್ಲಾ ಪೊಲೀಸ್ ಅಧೀಕ್ಷಕರಾದ ಡಾ.ಶೋಭರಾಣಿ ವಿ.ಜೆ., ಇತರರು ಉಪಸ್ಥಿತರಿರಲಿದ್ದಾರೆ.

# ಅನ್ನದಾತ ಉಪವಾಸ

## 70 ವಯಸ್ಸಿನ ರೈತ ಜಗಜಿತ್ ಸಿಂಗ್ ದಲ್ಲೇವಾಲ ಅಮರಣಾಂತ ಉಪವಾಸ ಕೇಂದ್ರ ಸರ್ಕಾರದ ಭರವಸೆ ಈಡೇರಿಸಲಿ | ಜೆ.ಎಂ.ವೀರಸಂಗಯ್ಯ ಆಗ್ರಹ



> ದೇಶಕ್ಕೆ ಅನ್ನಕೊಡುವ ರೈತರ ಬೇಡಿಕೆಗಳನ್ನು ಸರ್ಕಾರಗಳು ನಿರ್ಲಕ್ಷ್ಯಧೋರಣೆ ತೋರದೇ ಈಡೇರಿಸಬೇಕು. ರೈತ ಬೆಳೆಯದಿದ್ದರೆ ದೇಶಕ್ಕೆ ಅನ್ನದ ಕೊರತೆ ಎದುರಿಸಬೇಕಾಗ ಬಹುದೆಂಬ ಅರಿವು ಆಳುವ ಸರ್ಕಾರಗಳಿಗಿರಬೇಕು. ವಿದ್ಯುತ್ ಖಾಸಗೀಕರಣಗೊಳಿಸುವ ಮೂಲಕ ಅನ್ನದಾನ ಪಂಪ್ ಸೆಟ್‌ಗೂ ಶುಲ್ಕವಿಧಿಸುವುದು ರೈತರ ಬದುಕಿಗೆ ಬರೆ ಎಳೆದಂತಾಗಲಿದೆ. ಸಾಲದ ಸುಳಿಗೆ ಸಿಲುಕಿರುವ ರೈತರ ಸಾಲ ಮನ್ನಾ ಮಾಡಬೇಕು.
>
> – ಜೆ.ಎಂ.ವೀರಸಂಗಯ್ಯ, ರಾಜ್ಯಪ್ರಶಸ್ತಿ ಪುರಸ್ಕೃತರು, ರೈತ ಹೋರಾಟಗಾರ

**ಹಂಪಿ ಟೈಮ್ಸ್ ಹೊಸಪೇಟೆ**


ರೈತರ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆ ಖಾತರಿಗೆ ಕಾನೂನು ಜಾರಿ, ಸಾಲ ಮನ್ನಾ ಸೇರಿದಂತೆ ಇತರ ಬೇಡಿಕೆಗಳ ಈಡೇರಿಸುವಂತೆ ಆಗ್ರಹಿಸಿ ನ.26ರಿಂದ ಪಂಜಾಬ್–ಹರ್ಯಾಣ ಗಡಿಯಲಿ 70 ವಯಸ್ಸಿನ ಹಿರಿಯ ರೈತ ಜಗಜಿತ್ ಸಿಂಗ್ ದಲ್ಲೇವಾಲ ನಡೆಸುತ್ತಿರುವ ಅಮರಣಾಂತ ಉಪವಾಸ ಸತ್ಯಗ್ರಹಕ್ಕೆ ಸರ್ಕಾರ ಕೂಡಲೇ ಸ್ಪಂದಿಸಿಬೇಕು. 48ನೇ ದಿನಕ್ಕೆ ಕಾಲಿಟ್ಟಿರುವ ಉಪವಾಸ ಸತ್ಯಾಗ್ರಹದಲ್ಲಿ ದೇಹನಿತ್ರಾಣಗೊಂಡು, ತೂಕ ಕುಸಿದಿದ್ದು, ಜೀವಕ್ಕೆ ಅಪಾಯ ಎದುರಾಗಿದ್ದರೂ ಕೇಂದ್ರ ಸರ್ಕಾರ ರೈತಪರ ನಿರ್ಧಾರ ತೆಗೆದುಕೊಳ್ಳುತ್ತಿಲ್ಲ. ಉಪವಾಸ ಸತ್ಯಾಗ್ರಹದಲ್ಲಿರುವ ರೈತನಿಗೆ ಜೀವಕ್ಕೆ ಅಪಾಯವಾದರೆ ಕೇಂದ್ರ ಸರ್ಕಾರವೇ ನೇರ ಹೊಣೆಯಾಗಲಿದೆ ಎಂದು ಹಿರಿಯ ರೈತ ಹೋರಾಟಗಾರ ರಾಜ್ಯ ಪ್ರಶಸ್ತಿ ಪುರಸ್ಕೃತ ಜೆ.ಎಂ.ವೀರಸಂಗಯ್ಯ ಹೇಳಿದರು.

ಸಂಯುಕ್ತ ಹೋರಾಟ–ಕರ್ನಾಟಕದಿಂದ ಸೋಮವಾರ ಜಿಲ್ಲಾಧಿಕಾರಿಗಳ ಮೂಲಕ ಪ್ರಧಾನಿ ಹಾಗೂ ರಾಷ್ಟ್ರಪತಿಗಳಿಗೆ ಮನವಿ ಸಲ್ಲಿಸಿ ಮಾತನಾಡಿದರು.

ಕೇಂದ್ರ ಸರ್ಕಾರ ಕರಾಳ ಕೃಷಿ ಕಾನೂನುಗಳನ್ನು ಹಿಂಪಡೆದು, ರೈತರ ಜೀವ ಉಳಿಸಬೇಕು. ಗಡಿಯಲ್ಲಿ ಹೋರಾಟ ನಡೆಸುತ್ತಿರುವವರ ಜೊತೆ ಮಾತುಕತೆ ಆರಂಭಿಸಬೇಕು. ಬೆಂಬಲ ಬೆಲೆ ಖಾತರಿ ನೀಡುವ ಕಾನೂನು ಜಾರಿ ಮಾಡಬೇಕು. ಎಲ್ಲಾ ರೈತರ ಕೃಷಿ ಸಾಲಗಳನ್ನು ಮನ್ನಾ ಮಾಡಬೇಕು. ವಿದ್ಯುತ್ ಖಾಸಗೀಕರಣಮಾಡಬಾರದು. 60 ವರ್ಷ ದಾಟಿದ ಎಲ್ಲಾ ಕೃಷಿಕರಿಗೆ ಮಾಸಿಕ 5 ಸಾವಿರ ಪಿಂಚಣಿ ಸೇರಿದಂತೆ ವಿವಿಧ ಬೇಡಿಕೆಗಳನ್ನು ಶೀಘ್ರ ಈಡೇರಿಸಬೇಕು ಎಂದು ಆಗ್ರಹಿಸಿದರು.

ರಾಜ್ಯ ಸಂಘಟನಾ ಕಾರ್ಯದರ್ಶಿ ಬಿ.ಗೋಣಿಬಸಪ್ಪ, ಮುಖಂಡರಾದ ಜೆ.ಮಲ್ಲಿ ಕಾರ್ಜುನ, ರವಿಕುಮಾರ್ ತಂಬ್ರಳ್ಳಿ, ಜಡಿಯಪ್ಪ ಮಟ್ರಿ ಸೇರಿದಂತೆ ರೈತರು ಇದ್ದರು.

## ಆನಂದ ಬಾಣ





### ಇಂದು ಕೊಪ್ಪಳಕ್ಕೆ ರೈಲ್ವೆ ರಾಜ್ಯ ಸಚಿವ ವಿ.ಸೋಮಣ್ಣ



**ಹಂಪಿ ಟೈಮ್ಸ್ ಕೊಪ್ಪಳ** : ಜಲ ಶಕ್ತಿ ಮತ್ತು ರೈಲ್ವೆ ಖಾತೆಯ ರಾಜ್ಯ ಸಚಿವ ವಿ.ಸೋಮಣ್ಣ ಜ. 14 ರಂದು ಕೊಪ್ಪಳ ಜಿಲ್ಲಾ ಪ್ರವಾಸ ಮಾಡಲಿದ್ದಾರೆ. ಬೆಳಿಗ್ಗೆ 9 ಗಂಟೆಗೆ ಶ್ರೀ ಗವಿಮಠಕ್ಕೆ ಭೇಟಿ ನೀಡುವರು. ಬೆಳಿಗ್ಗೆ 10.30ಕ್ಕೆ ಕೊಪ್ಪಳ ನಗರದ ಕುಷ್ಟಗಿ ರಸ್ತೆಯ ರೈಲ್ವೆ ಮೇಲ್ಸೇತುವೆ ಉದ್ಘಾಟನೆ ಕಾರ್ಯಕ್ರಮ ನೆರವೇರಿಸಿದ ಬಳಿಕ ಕೊಪ್ಪಳ ರೈಲು ನಿಲ್ದಾಣದಲ್ಲಿ ನಡೆಯುತ್ತಿರುವ ಅಮೃತ ಭಾರತ್ ಸ್ಟೇಷನ್ ಕಾಮಗಾರಿಯ ಪರಿಶೀಲನೆ ನಡೆಸಲಿದ್ದಾರೆ ಎಂದು ರೈಲ್ವೆ ರಾಜ್ಯ ಸಚಿವರ ವಿಭಾಗೀಯ ಅಧಿಕಾರಿಗಳು ತಿಳಿಸಿದ್ದಾರೆ.

## ಭಾಷಣ ಸ್ಪರ್ಧೆಯಲ್ಲಿ ನಾಗರಾಜ್ ಗಂಟಿ ರಾಜ್ಯಕ್ಕೆ ಪ್ರಥಮ



**ಹಂಪಿ ಟೈಮ್ಸ್ ಹೊಸಪೇಟೆ**


ಕರ್ನಾಟಕ ಗಮಕ ಕಲಾ ಪರಿಷತ್, ಶ್ರೀ ವಾಗ್ದೇವಿ ಗಮಕಲಾ ಪ್ರತಿಷ್ಠಾನ, ಸಂಯುಕ್ತಾಶ್ರಯದಲ್ಲಿ ಕನ್ನಡ ಸಹೃದಯ ಪ್ರತಿಷ್ಠಾನ, ಕನ್ನಡ ಸಂಸ್ಕೃತಿ ಇಲಾಖೆ ಸಹಕಾರದಿಂದ ಜ.12 ಬೆಂಗಳೂರಿನಲ್ಲಿ ನಡೆದ ರಾಜ್ಯಮಟ್ಟದ ಕವಿ ಕಾವ್ಯ ಪರಿಚಯ ಭಾಷಣ ಸ್ಪರ್ಧೆಯಲ್ಲಿ ಪದವಿ ವಿಭಾಗದಿಂದ "ಶರಣರ ವಚನ ಕಾವ್ಯ" ಎಂಬ ವಿಷಯದ ಕುರಿತು ಭಾಷಣ ಮಾಡಿದ ನಗರದ ಹೊಸಪೇಟೆಯ ಎಸ್‌ಬಿಬಿಎನ್ ಬಿ.ಈಡಿ ಕಾಲೇಜಿನ ಪ್ರಶಿಕ್ಷಣಾರ್ಥಿ ನಾಗರಾಜ್ ಗಂಟಿ ರಾಜ್ಯಕ್ಕೆ ಪ್ರಥಮ ಸ್ಥಾನ ಗಳಿಸಿ, ಬಹುಮಾನ ಮತ್ತು ಅಭಿನಂದನಾ ಪತ್ರ ಪಡೆದಿದ್ದಾರೆ.

ವಿದ್ಯಾರ್ಥಿಯ ಪ್ರತಿಭೆಗೆ ಕಾಲೇಜಿನ ಅಧ್ಯಕ್ಷ ಕರಿಬಸವರಾಜ ಬಾದಾಮಿ, ಪ್ರಾಂಶುಪಾಲರು, ಸಿಬ್ಬಂದಿ ವರ್ಗ ಹರ್ಷ ವ್ಯಕ್ತಪಡಿಸಿದ್ದಾರೆ.


ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
HAPPY
Makar Sankranti
50% off
on Print & Digital Package Advertisements
Boost your business growth this new year!
Book a package advertisement now and grab an exclusive discount of up to 50%. Make your promotions quick, impactful, and eye-catching with this limited-time offer!"
scan to Read e-paper
Print & Digital News Paper
9448633038
hampitimes@gmail.com
visit www.epaper.hampitimes.com


# ಗುಣಮಟ್ಟದ ಶಿಕ್ಷಣಕ್ಕೆ ವಿದ್ಯಾನಿಕೇತನ ಕಾಲೇಜ್ ಆದ್ಯತೆ

## ಕಾಲೇಜಿನ ಅಧ್ಯಕ್ಷ ಶರತ್ ಚಂದ್ರ ಹೇಳಿಕೆ | ಬೋರ್ಡ್ ಟಾಪರ್‌ಗೆ ಮತ್ತು ನೀಟ್ ಟಾಪರ್‌ಗೆ ತಲಾ ಒಂದು ಲಕ್ಷ ರೂ




> ನಿಮ್ಮ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡುವುದು ನಮ್ಮ ಧ್ಯೇಯ ಇದಕ್ಕಾಗಿ ನಾವು ಯಾವುದೇ ರಾಜಿಮಾಡಿ ಕೊಳ್ಳೋಲ್ಲ. ಉತ್ಕೃಷ್ಟ ಗುಣಮಟ್ಟದ ಶಿಕ್ಷಣಕ್ಕೆ ಮತ್ತೊಂದು ಹೆಸರೇ ಶ್ರೀ ವಿದ್ಯಾನಿಕೇತನ ಕಾಲೇಜ್
>
> – ಶರತ್ ಚಂದ್ರ ಅಧ್ಯಕ್ಷರು ಶ್ರೀ ವಿದ್ಯಾನಿಕೇತನ ಕಾಲೇಜ್,

**ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**

ವಿದ್ಯಾನಿಕೇತನ ಕಾಲೇಜ್ ಕೇವಲ ಶಿಕ್ಷಣ ನೀಡುವುದಷ್ಟೆ ಅಲ್ಲ. ಪ್ರತಿಭಾವಂತರನ್ನು ಡಾಕ್ಟರ್ ಮತ್ತು ಇಂಜಿನಿಯರ್‌ಗಳನ್ನಾಗಿ ತಯಾರು ಮಾಡುವ ಫ್ಯಾಕ್ಟರಿ ಎಂದು ಶ್ರೀ ವಿದ್ಯಾನಿಕೇತನ ಕಾಲೇಜಿನ ಅಧ್ಯಕ್ಷ ಶರತ್ ಚಂದ್ರ ಅಭಿಪ್ರಾಯಪಟ್ಟರು.

ಶ್ರೀ ವಿದ್ಯಾನಿಕೇತನ ಕಾಲೇಜಿನ ವಾರ್ಷಿಕೋತ್ಸವ ಹಾಗೂ ಪ್ರತಿಭಾವಂತ ವಿದ್ಯಾರ್ಥಿಗಳ ಸನ್ಮಾನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

2023 –24 ರ ಶೈಕ್ಷಣಿಕ ವರ್ಷದಲ್ಲಿ ಅಖಂಡ ಬಳ್ಳಾರಿ ವಿಜಯನಗರ ಜಿಲ್ಲೆಗೆ ನಮ್ಮ ವಿದ್ಯಾನಿಕೇತನ ಕಾಲೇಜ್ ಪ್ರಥಮ ಸ್ಥಾನ ಪಡೆಯಲು ನಿಮ್ಮೆಲ್ಲರ ಸಹಕಾರದಿಂದ ಮಾತ್ರ ಸಾಧ್ಯವಾಗಿದೆ. ನಾನು ನಿಮಗೆಲ್ಲ ಭರವಸೆ ನೀಡುತ್ತೇನೆ ಈ ಬಾರಿ ಕೂಡ ಅಖಂಡ ಜಿಲ್ಲೆಗೆ ನಮ್ಮ ಕಾಲೇಜು ಮತ್ತೆ ಪ್ರಥಮ ಸ್ಥಾನ ಬರಲಿದೆ ಎಂದು ವಿಶ್ವಾ ವ್ಯಕ್ತಪಡಿಸಿದರು. ನಮ್ಮ ಕಾಲೇಜಿನ ಫಲಿತಾಂಶಕ್ಕೆ ಸ್ವತಃ ವಿಜಯನಗರ ಜಿಲ್ಲಾಧಿಕಾರಿಗಳಾದ ಎಂ ಎಸ್ ದಿವಾಕರ್ ಅವರು ಪ್ರಶಂಸೆ ವ್ಯಕ್ತಪಡಿಸಿದ್ದಾರೆ.

ನಮ್ಮ ಕಾಲೇಜಿಗೆ ಬರುವ ವಿದ್ಯಾರ್ಥಿ/ವಿದ್ಯಾರ್ಥಿನಿಯರ ಸಂಖ್ಯೆ ಈ ವರ್ಷ ಗಣನೀಯ ಪ್ರಮಾಣದಲ್ಲಿ ಏರಿದ್ದು ನಮ್ಮ ಜವಾಬ್ದಾರಿ ಮತ್ತಷ್ಟು ಹೆಚ್ಚಾಗಿದ್ದು ಗುಣಮಟ್ಟದ ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ನೀಡುತ್ತಿದ್ದೇವೆ ಎಂದರು.

2023 –24 ರ ಶೈಕ್ಷಣಿಕ ವರ್ಷದಲ್ಲಿ ಒಬ್ಬ ವಿದ್ಯಾರ್ಥಿ ಎನ್‌ಐಟಿ ಸೂರತ್ಕಲ್ ನಲ್ಲಿ ವ್ಯಾಸಂಗ ಮಾಡುತ್ತಿದ್ದು 13 ವಿದ್ಯಾರ್ಥಿಗಳು ಡಾಕ್ಟರ್, 131 ವಿದ್ಯಾರ್ಥಿಗಳು ಇಂಜಿನಿಯರಿಂಗ್. ರಾಜ್ಯ ದನಾನಾ ಪ್ರತಿಷ್ಠಿತ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿದ್ದಾರೆಂದು ಹರ್ಷ ವ್ಯಕ್ತಪಡಿಸಿದರು.

ವಿದ್ಯಾರ್ಥಿಗಳನ್ನು ಉತ್ತೇಜಿಸಲಿಕ್ಕಾಗಿ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಕಳೆದ ಬಾರಿ ನನ್ನ ಸ್ವಂತ ಪಾಕೆಟ್ ಮನಿಯಲ್ಲಿ ಮೊದಲ ಸ್ಥಾನ ಪಡೆದವರಿಗೆ (98%) ಒಂದು ಲಕ್ಷ , ದ್ವಿತೀಯ ಸ್ಥಾನ ಪಡೆದ(96%) ವಿದ್ಯಾರ್ಥಿಗೆ 50,000 /– ನೀಡಿದ್ದೇವೆ ಎಂದು ಹೇಳಿದರು. ಈ ಬಾರಿ ಇದನ್ನು ವಿಸ್ತರಿಸಲಾಗಿದ್ದು, ಬೋರ್ಡ್ ಟಾಪರ್‌ಗೆ ಒಂದು ಲಕ್ಷ ಮತ್ತು ನೀಟ್ ಟಾಪರ್‌ಗೆ ಒಂದು ಲಕ್ಷ ನೀಡಲಾಗಿದೆ. ಜೊತೆಗೆ 11 ಪ್ರತಿಭಾವಂತ ಸ್ಟೂಡೆಂಟ್ ಗಳಿಗೂ 50.000 ಸಾವಿರ ನೀಡಲಾಗಿದೆ ಎಂದರು. 2024 25ರ ಶೈಕ್ಷಣಿಕ ವರ್ಷಕ್ಕೆ 50 ವಿದ್ಯಾರ್ಥಿಗಳು ಪ್ರತಿಭಾವಂತರಾಗಿ ಚೆಕ್ಕ್ ತೆಗೆದುಕೊಳ್ಳಲು ತಯಾರು ಮಾಡಲಾಗಿದೆ ಎಂದರು.

ಈ ಸಂದರ್ಭದಲ್ಲಿ ಪ್ರಾಂಶುಪಾಲರಾದ ಶ್ರೀ ಶೇಖರ್ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು. ಈ ಸಂದರ್ಭದಲ್ಲಿ ಹೆಗ್ಡಾಳ್ ನಾಗೇಂದ್ರ.ಡಾ. ಎ ಎಂ ಎ ಸುರೇಶ್ಕುಮಾರ್. ಎ ಎಂ ಎ ಪ್ರಸಾದ್. ಅಶೋಕ್ ಮೆಹರವಾಡೆ. ಜಿನ್ನಾಸಾಬ್ ಹಾಗೂ ಆಡಳಿತ ಮಂಡಳಿಯವರು ಉಪಸ್ಥಿತರಿದ್ದರು.

## ಸ್ಟುಡೆಂಟ್ ಕಾಲಂ

### ಜಗತ್ತಿನ ಶಕ್ತಿಶಾಲಿ ಆಯುಧ ಶಿಕ್ಷಣ

ಗಂಗಾಪುರ ಎನ್ನುವ ಗ್ರಾಮದಲ್ಲಿ ಜೀವನ್ ಎನ್ನುವ ಒಬ್ಬ ಹುಡುಗ ವಾಸವಾಗಿದ್ದ. ಜೀವನ್ ಒಂದು ಅಸ್ಪೃಶ್ಯ ಜನಾಂಗದಲ್ಲಿ ಹುಟ್ಟಿದನು.



ಅವನು ಬೇರೆ ಜಾತಿ, ಅವನನ್ನು ನಾವು ಮುಟ್ಟಬಾರದು ಎಂದು ಇನ್ನಿತರೇ ಜಾತಿಯ ಹುಡುಗರು ಅವನನ್ನು ಹೀಯಾಳಿಸುತ್ತಿದ್ದರು. ಮತ್ತೊಬ್ಬ ಹುಡುಗ 'ನಮ್ಮದು ದೊಡ್ಡ ಜಾತಿ, ನಿಮ್ಮದು ಕೀಳ ಜಾತಿ' ಎಂದು ಅವನಿಗೆ ಬಹಳ ಹಿಂಸೆ ಮಾಡುತ್ತಿದ್ದನು. ಇದೆಲ್ಲವನ್ನು ಕೇಳಿಸಿಕೊಂಡ ಜೀವನ್ ತನ್ನ ಮನೆಗೆ ಅಳುತ್ತಾ ಹೋದನು. ಅವನ ತಂದೆ ತಾಯಿ 'ಯಾಕೆ ಅಳುತ್ತಿದ್ದೀಯ?' ಎಂದು ಕೇಳಿದರು. ಆಗ ಜೀವನ್ ನಡೆದ ಘಟನೆಯನ್ನು ಹೇಳಿದನು. ಅದನ್ನು ಕೇಳಿಸಿಕೊಂಡ ತಂದೆ ತಾಯಿ ಸಿಟ್ಟು ಮಾಡಿಕೊಂಡು ಇತರೆ ಹುಡುಗರನ್ನು ಹೊಡೆಯುವುದಕ್ಕೆ ಹೋಗಲಿಲ್ಲ. ಬದಲಾಗಿ 'ನನ್ನ ಪ್ರೀತಿಯ ಮಗನೇ ಜೀವನ್, ನೀನು ಒಬ್ಬ ಪುಟ್ಟರಾಜ. ನನ್ನ ಚಿನ್ನ, ನನ್ನ ಮುದ್ದು' ಎಂದು ಸಮಾಧಾನ ಮಾಡಿದರು. ಹೆತ್ತವರಿಗೆ ಹೆಗ್ಗಣವೆ ಮುದ್ದು ಅಲ್ಲವೇ ತಂದೆ ತಾಯಿಗೆ ತಮ್ಮ ಮಕ್ಕಳು ಹೇಗೆ ಇದ್ದರೂ ಅವರೇ ದೊಡ್ಡ ಪ್ರಪಂಚ.

ನನ್ನ ಮಗ ಚೆನ್ನಾಗಿ ಓದಲಿ, ಒಬ್ಬ ವಿದ್ಯಾವಂತನಾಗಲಿ, ಜ್ಞಾನವಂತನಾಗಲಿ ಎಂಬುದು ಜೀವನ್ ತಂದೆ ತಾಯಿಯ ಆಸೆಯಾಗಿತ್ತು. ಹಾಗಾಗಿ ಅವರು ಜೀವನ್‌ನನ್ನು ಶಾಲೆಗೆ ಸೇರಿಸಿದರು. ಅವನು ಶಾಲೆಗೆ ಹೋದ ತಕ್ಷಣವೇ ಅಲ್ಲಿದ್ದ ಹುಡುಗರು ಅವನನ್ನು ನೋಡಿ ನಗುತ್ತಿದ್ದರು. ಏಕೆಂದರೆ ಅವನ ಬಟ್ಟೆ ಸ್ವಲ್ಪ ಹರಿದಿದ್ದವು. ಆದರೂ ಜೀವನ್ ತನಗೆ ತಾನೆ ಸಮಾಧಾನ ಮಾಡಿಕೊಂಡ. ಪ್ರಾರ್ಥನೆ ಮುಗಿಸಿಕೊಂಡು ಕ್ಲಾಸಿಗೆ ಹೋದ. ಅಲ್ಲಿಯೂ ಕೂಡ ಅವನನ್ನು 'ನೀನು ಕೀಳು ಜಾತಿಯವನು ನೀನು ಬೆಂಚ್ ಮೇಲೆ ಕುಳಿತುಕೊಳ್ಳುವುದಕ್ಕೆ ಅರ್ಹನಲ್ಲ' ಎಂದು ಅವನನ್ನು ನೆಲದ ಮೇಲೆ ಕೂರಿಸಿದರು.

ಶಿಕ್ಷಕರು ಕ್ಲಾಸಿಗೆ ಬಂದರು. ಜೀವನ್‌ನನ್ನು ನೋಡಿ ಬೆಂಚ್ ಮೇಲೆ ಕುಳಿತುಕೊ ಎಂದರು. ಅವನು ಬೆಂಚ್ ಮೇಲೆ ಕುಳಿತುಕೊಂಡ. ತಕ್ಷಣವೇ ಇನ್ನಿತರೇ ಹುಡುಗರು ಕ್ಲಾಸಿಂದ ಹೊರಗೆ ಹೋದರು. ಶಿಕ್ಷಕರು 'ಯಾಕೆ?' ಅಂತ ಕೇಳಿದರು. ಅವರು ಹರಿಜನ ಸರ್ ಅದಕ್ಕೆ ಎಂದರು. 'ಅದಕ್ಕೆ ಹೀಗಾ ಮಾಡೋದು?. ಹರಿ ಎಂದರೆ ಶಿವ. ಅವರು ಶಿವನ ಮಕ್ಕಳು' ಎಂದರು ಶಿಕ್ಷಕರು. ಇದನ್ನು ಕೇಳಿಸಿಕೊಂಡ ಜೀವನ್‌ನ ಮುಖದಲ್ಲಿ ಒಂದು ಕಿರುನಗೆ ಬಂತು. ಏಕೆಂದರೆ ಶಿಕ್ಷಕರು ಹುಡುಗರ ತರಾನೇ ಹೇಳಬಹುದಿತ್ತು. ಆದರೆ ಶಿಕ್ಷಕರ ಮನಸ್ಸು ಒಂದು ಮಲ್ಲಿಗೆ ಹೂವಿನ ತರಹ. ಅವರ ಕಣ್ಣಿಗೆ ಎಲ್ಲರೂ ಸಮಾನರು ಎಂಬ ಭಾವನೆ ಇರುತ್ತದೆ. ನಂತರ ಶಿಕ್ಷಕರು ಎಲ್ಲಾ ಮಕ್ಕಳನ್ನು ಒಳಗೆ ಕರೆದು 'ಯಾರಿಗೂ ಬೇದ ಭಾವ ಮಾಡಬಾರದು. ಯಾರನ್ನು ಕೀಳಾಗಿ ಕಾಣಬಾರದು' ಎಂದು ತಿಳುವಳಿಕೆ ನೀಡಿದರು.

ಆದರೂ ಹುಡುಗರು ಇಂತಹ ಉಪದೇಶಗಳನ್ನು ಒಂದು ಕಿವಿಯಿಂದ ಕೇಳಿಸಿಕೊಂಡು ಇನ್ನೊಂದು ಕಿವಿಯಿಂದ ಬಿಡುತ್ತಿದ್ದರು. ಶಿಕ್ಷಕರು ಜೀವನ್‌ನನ್ನು ಕರೆದು 'ನೋಡು, ನೀನು ಸಾಧನೆ ಮಾಡಬೇಕು. ಸಾಧಿಸಿದರೆ ಈ ಜಗತ್ತಿನಲ್ಲಿ ಮರ್ಯಾದೆ ಸಿಗುವುದು' ಎಂದು ಹೇಳಿದರು. ಇದನ್ನು ಜೀವನ್ ತುಂಬಾ ಮನಸ್ಸಿಗೆ ಹಚ್ಚಿಕೊಂಡ. ತನ್ನ ವಿದ್ಯಾಭ್ಯಾಸವನ್ನು ಪ್ರಾರಂಭಿಸಿದ. ಅವನ ಪ್ರಯತ್ನಕ್ಕೆ ಯಾವತ್ತಿಗೂ ಸೋಲು ಇರಲಿಲ್ಲ. ಅವನು 10ನೇ ತರಗತಿಯಲ್ಲಿ 625 ಕ್ಕೆ 625 ಅಂಕಗಳನ್ನು ಪಡೆದನು. ಇದನ್ನು ನೋಡಿದ ಅಲ್ಲಿನ ಹುಡುಗರಿಗೆ ಮೊದಲು ಬೇಧ ಭಾವ ಬಿಟ್ಟು ವಿದ್ಯಾಭ್ಯಾಸ ಮಾಡಬೇಕೆಂಬುದು ಅರ್ಥವಾಯಿತು.

ಮುಂದೆ ಜೀವನ್ ಕೂಡ ಒಬ್ಬ ಒಳ್ಳೆಯ ಶಿಕ್ಷಕನಾದನು. ಯಾವತ್ತಿಗೂ, ಯಾರನ್ನು ನಾವು ಕೀಳಾಗಿ ಕಾಣಬಾರದು. ಒಬ್ಬೊಬ್ಬರಲ್ಲಿ ಒಂದು ಪ್ರತಿಭೆ ಇರುತ್ತದೆ. ಶಿಕ್ಷಕರ ವೃತ್ತಿಗೆ ಶ್ರೇಷ್ಠ ವೃತ್ತಿ ಎಂದು ಕರೆಯುತ್ತಾರೆ. ಒಬ್ಬ ಹಿಂದುಳಿದ ಹುಡುಗನನ್ನು ಮುಂದೆ ಬರಲು ಮಾಡಿದ ಶಿಕ್ಷಕರ ವೃತ್ತಿಗೆ ಧನ್ಯವಾದಗಳು. ಈ ಕಥೆಯಂತೆ ನನ್ನ ಶಾಲೆ ಮತ್ತು ನನ್ನ ಪ್ರೀತಿಯ ಎಲ್ಲಾ ಶಿಕ್ಷಕರು ನಡೆದುಕೊಳ್ಳುವ ರೀತಿ ನೀತಿ ನನಗೆ ಅಚ್ಚುಮೆಚ್ಚಿಗೆಯಾಗಿದೆ. ಜ್ಞಾನವೆಂಬ ಕತ್ತಲನ್ನು ಕಳೆದು ಸುಜ್ಞಾನವೆಂಬ ಬೆಳಕಿಗೆ ಬರುವಂತೆ ಮಾಡಿದ ನನ್ನ ಶಿಕ್ಷಕರ ವೃಂದಕ್ಕೆ ಧನ್ಯವಾದಗಳು. ಜಗತ್ತನ್ನು ಬದಲಾಯಿ ಸಲು ನಾವು ಬಳಸಬಹುದಾದ ಅತ್ಯಂತ ಶಕ್ತಿಶಾಲಿ ಆಯುಧವೆಂದರೆ ಒಳ್ಳೆ ಶಿಕ್ಷಣ. ಅಲ್ಲವೇ?

**– ಸಂತೋಷ್ ಕೆ.ಎಸ್. 9ನೇ ತರಗತಿ**
**ಸರ್ಕಾರಿ ಪ್ರೌಢಶಾಲೆ ಬಸರಕೊಡು. ಹಗರಿಬೊಮ್ಮನಹಳ್ಳಿ(ತಾ)**

## ನೀವೂ ಬರೆಯಬಹುದು

ಹಂಪಿ **ಟೈಮ್ಸ್** ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

### ಬೆಳಕಿನ ಹಾದಿ

ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**–: ಸಂಪಾದಕರು :–**
**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ–ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

**ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.**

**– ಜಾಹೀರಾತು ವ್ಯವಸ್ಥಾಪಕರು.**

# ಪಠ್ಯಗಳು ರಾಜಕೀಯದಿಂದ ಹೊರಬರಲಿ ಮಕ್ಕಳ ಬದುಕಿಗೆ ಬಲ ತುಂಬುವ ತತ್ವ ಇರಲಿ



ನಾವು ಮನುಷ್ಯರಾಗಿರುವ ಕಾರಣದಿಂದ ಸಮಾಜದಲ್ಲಿ ಕಟ್ಟು ಕಟ್ಟಳೆಯನ್ನು ಕಟ್ಟಿಕೊಂಡು ಬದುಕು ನಡೆಸುತ್ತಿದ್ದೇವೆ. ಈ ಬದುಕು ಸಪ್ಪೆಯಾಗದಂತೆ ಭಾಷೆ–ಭಾವನೆ; ನಡೆ–ನುಡಿ; ಆಚಾರ–ವಿಚಾರ; ನಂಬಿಕೆಗಳ ಜೊತೆಯಲ್ಲಿ ದೈವ, ದೇವರುಗಳು ಜೀವಂತವಾಗಿ ನಮ್ಮ ಜೊತೆಯಲ್ಲಿ ನಡೆದಾಡುತ್ತಿವೆ ಇವೆಲ್ಲವು ನಮ್ಮ ಜೀವನದ ಗುಣಮಟ್ಟವನ್ನು ಕಾಪಾಡುವುದಕ್ಕೆ ಅಗತ್ಯವಾಗಿದೆ ಎಂಬುವುದು ನಮಗೆ ತಿಳಿದಿರುವ ಸತ್ಯ. ಬದುಕು ಎನ್ನುವುದು ನಿಂತ ನೀರಲ್ಲ. ಅದೊಂದು ಚಲನಶೀಲತೆಯ ಬಿಂದು. ನಿರಂತರ ಒಂದನ್ನು ಸೇರುವ, ಒಂದನ್ನು ಕಳೆದುಕೊಳ್ಳುವ ಸಂವೇದನೆ ಇದ್ದೇ ಇರುತ್ತದೆ. ಸೋಲು–ಗೆಲುವು; ನೋವು–ನಲಿವು; ಕಷ್ಟ–ಸುಖಗಳು ನಮಗೆ ಅರಿವಿಗೆ ದಕ್ಕುವಂತೆ, ದಕ್ಕದಂತೆ ಬಂದು ಹೋಗುತ್ತವೆ. ಇದನ್ನೆಲ್ಲ ಮೀರಿ ನಾವು ಉನ್ನವಾದ, ಸಮಾಜಕ್ಕೆ ಆದರ್ಶ ಅಂಬೋ ಜೀವನವನ್ನುನಡೆಸಬೇಕು. ಈ ಲೋಕಕ್ಕೆ ಅದು ಮಾದರಿಯಾಗಬೇಕು ಎನ್ನುವುದು ಪ್ರತಿಯೊಬ್ಬರ ಆಶಯವು ಆಗಿರುತ್ತದೆ. ಈ ಹಿನ್ನೆಲೆಯಿಂದ ಪ್ರತಿಯೊಬ್ಬರು ಒಂದೊಂದು ಆದರ್ಶವನ್ನು ತನ್ನ ಮುಂದಿಟ್ಟುಕೊಂಡು ನಡೆಯುವುದು ಮತ್ತು ತನ್ನವರನ್ನು ನಡೆಸುವುದು ಸಾಮಾನ್ಯವಾಗಿತ್ತು.

ನಮ್ಮ ಮುಂದೆ ಆದರ್ಶ ಅನ್ನುವ ಮಾದರಿಗಳಿದ್ದವು, ಅವುಗಳೆಲ್ಲ ನಮ್ಮ ಪರಿಸರದಲ್ಲಿ ಬದುಕಿದ ಸಮಾಜಕ್ಕೆ ಒಳಿತನ್ನು ಮಾಡಿದ, ತನ್ನವರನ್ನು ಕಾಪಾಡಿದ, ನಾಡನ್ನು ನಾಡವರನ್ನು ರಕ್ಷಿಸಿದ, ಕುಲ, ಜಾತಿ, ಧರ್ಮದ ಹಿರಿಮೆಯನ್ನು ಉನ್ನತವಾಗಿಸಿದ, ಮಾನವ ಸತ್ವವನ್ನು ಲೋಕಕ್ಕೆ ನೀಡಿದ ವ್ಯಕ್ತಿಗಳಾಗಿದ್ದಾರೆ. ಇವರೆಲ್ಲ ಜನರ ಚಿಂತನೆ, ನಂಬಿಕೆಗಳಲ್ಲಿ ಮಹಾತ್ಮರಾಗಿ, ದೇವರಾಗಿ ನೆಲೆ ನಿಂತವರಲ್ಲದೇ ಶ್ರೇಷ್ಟ ಅನ್ನುವ ವ್ಯಕ್ತಿತ್ವವನ್ನು ಆರೋಪಿಸಿಕೊಂಡಿದ್ದಾರೆ ಈ ಕಾರಣದಿಂದ ಇವರಂತೆ ನಮ್ಮ ಮನೆಯ ಮಕ್ಕಳು ಬೆಳೆಯಬೇಕು ಅಂಬೋ ಒತ್ತಾಸೆಯೇ ನಮ್ಮಲ್ಲಿ ಆದರ್ಶದ ಮಾದರಿಗಳು ಹುಟ್ಟಿಕೊಂಡು ಜೀವಂತವಾಗಿರುವುದಕ್ಕೆ ಕಾರಣವಾಗಿದ್ದವು. ಮನೆಯಲ್ಲಿನ ತಾಯಂದಿರು, ಅಜ್ಜ–ಅಜ್ಜಿಯರಂತ ಹಿರಿಯ ಜೀವಗಳು ಮಕ್ಕಳಿಗೆ ಅನ್ನ–ನೀರು ನೀಡುವುದು ಅವರ ಬೆಳವಣಿಗೆಗೆ ಎಷ್ಟು ಮುಖ್ಯವೋ ಅಷ್ಟೇ ಮುಖ್ಯವಾಗಿ ಆದರ್ಶವೆನಿಸಿದ ವ್ಯಕ್ತಿಯ ವ್ಯಕ್ತಿತ್ವವನ್ನು, ಸಾಧನೆ, ಸಾಹಸವನ್ನು ಮಗುವಿನ ಮನಸ್ಸಿಗೆ ಧಾರೆ ಎರೆಯುವುದನ್ನು ಮರೆತಿರಲಿಲ್ಲ. ವಿವೇಕಾನಂದ ತಾಯಿಯು ತನ್ನ ಮಗುವಿಗೆ ಶ್ರೀಕೃಷ್ಣನ ಕತೆಯನ್ನು ಅವನ ವ್ಯಕ್ತಿತ್ವವನ್ನು ಹೇಳಿ ಬೆಳೆಸಿದಂತೆ; ಮಹಾತ್ಮ ಗಾಂಧೀಜಿಯ ತಾಯಿಯು ಶ್ರವಣ ಕುಮಾರ, ಸತ್ಯ ಹರಿಶ್ಚಂದ್ರರ ಕತೆಯನ್ನು ಹೇಳಿ ಬೆಳೆಸಿದರಂತೆ ಎನ್ನುವುದನ್ನು ನಾವು ಓದಿ ತಿಳಿದ್ದೇವೆ. ಈ ರೀತಿಯ ಸಂಸ್ಕಾರದ ಅಭಿವ್ಯಕ್ತಿಯ ಕ್ರಮಗಳು ಮಗುವನ್ನು ಸತ್ವಪೂರ್ಣವಾಗಿ ಬೆಳೆಸುವ ಜೊತೆಯಲ್ಲಿ ಕುಟುಂಬ, ಸಮಾಜ, ದೇಶವು ಭಕ್ತಿ ಭಾವಗಳ ಸಂಗಮ ವಾಗುವುದಕ್ಕೆ ಸಾಧ್ಯವಾಗು ತ್ತದೆ.



ಡಾ.ಸುಬ್ರಹ್ಮಣ್ಯ ಸಿ ಕುಂದೂರು
ಲೇಖಕರು, ಮಂಗಳೂರು

Scan For Digital Colourful
HAMPI TIMES E-paper

ಇಂದು ಬೆಳೆಯುತ್ತಿರುವ ಮಕ್ಕಳಲ್ಲಿ ಇಂತಹ ಆದರ್ಶದ ಮಾದರಿಯ ಅನುಕರಣೆಯು ಮರೆಯಾಗುತ್ತಿರುವುದನ್ನು ಸಹಜ ವೆಂಬಂತೆ ಕಾಣಿಸುತ್ತದೆ. ಹೀಗೆ ಆಗುವುದಕ್ಕೆ ನಮ್ಮ ಬದುಕಿನ ಪ್ರಜ್ಞೆ ಮತ್ತು ಪರಿಸರವೇ ಕಾರಣವಾಗಿದೆ. ಮಕ್ಕಳಿಗೆ ಈ ವ್ಯಕ್ತಿಯ ಜೀವನ ಗಾಥೆಯೇ ಆದರ್ಶವೆಂದು ಅವರಂತೆ ನಡೆಯಬೇಕೆಂದು ಹೇಳಿ ಕೊಡುವ ಅಜ್ಜಿ–ಅಜ್ಜರಂತಹ ಹಿರಿಜೀವಗಳು ಬಹುತೇಕ ಕುಟುಂಬಗಳ ಜೊತೆಯಲ್ಲಿ ಈಗ ಇಲ್ಲ. ಕೆಲವು ಕುಟುಂಬದಲ್ಲಿ ಹಿರಿಜೀವಗಳ ಇದ್ದರೂ ಅವರ ನೆಲದ ಪರಂಪರೆಯ ಮಾತು, ತಿಳುವಳಿಕೆಯನ್ನು ಮಕ್ಕಳಿಗೆ ಕಲಿಸುವುದಕ್ಕೆ ಪ್ರಜ್ಞಾವಂತ ತಂದೆ–ತಾಯಿ ಎನ್ನಿಸಿಕೊಂಡವರು ಒಪ್ಪುವುದಿಲ್ಲ. ಅವರ ತಿಳುವಳಿಕೆಯಲ್ಲಿ ನಾಗರೀಕ ಬಂಡವಾಳ ಕೇಂದ್ರಿತ ವಿವೇಚನೆಯನ್ನು ಮೈಗೆ ಹಚ್ಚಿಕೊಳ್ಳುವುದು ತಾಂತ್ರಿಕ–ಯಾಂತ್ರಿಕ ಮೀಮಾಂಸೆಯನ್ನು ರೂಢಿಸಿ ಕೊಳ್ಳುವುದೇ ಬದುಕಿನ ಆದರ್ಶವೆಂದು ನಂಬಿರುವ ಕಾರಣ ಹಿರಿಜೀವಗಳ ಅನುಭವ ಪೂರಿತ ಮಾತುಗಳು; ಜೀವನ ಮೌಲ್ಯಗಳ; ನಂಬಿಕೆಯ ನೆಲೆಯ ನಡೆ–ನುಡಿಗಳು ಕೀಳು ಮಟ್ಟದ್ದು ಅದನ್ನು ಮಕ್ಕಳು ಕಲಿತರೆ ಲೋಕದಲ್ಲಿ ಮೌಲ್ಯವನ್ನು ಕಳೆದುಕೊಳ್ಳುತ್ತಾರೆ ಅನ್ನುವ ವಿವೇಚನೆಯೇ ಆದರ್ಶ ಎನ್ನುವ ಮಾದರಿಯ ತಿಳುವಳಿಕೆಯನ್ನೇ ಕುಸಿಯುವಂತೆ ಮಾಡಿದೆ.

ಮೊಬೈಲ್, ಟಿವಿ, ಕಂಪ್ಯೂಟರ್ ಇತ್ಯಾದಿ ತಾಂತ್ರಿಕ ಮಾಧ್ಯಮಗಳು ನಿರೂಪಿಸುವ ಯೋಚನೆ ಮತ್ತು ಬದುಕಿನ ವಿನ್ಯಾಸಗಳೇ ನಮ್ಮ ಆದರ್ಶದ ಮಾದರಿಗಳಾಗಿ ದಕ್ಕುತ್ತಿರುವ ಕಾರಣದಿಂದ ದುರ್ಬಲವಾದ ಜೀವನ ಮೀಮಾಂಸೆಯ ಕಡೆಗೆ ಹೆಜ್ಜೆಯನ್ನು ಇಟ್ಟಿರುವುದು ನಮ್ಮ ಅರಿವಿಗೂ ಅನುಭವವಾಗುತ್ತಿದೆ ಅನ್ನಿಸುತ್ತದೆ. ಇಂದಿನ ನಿತ್ಯದ ಧಾರವಾಹಿಗಳ ನಮ್ಮ ಬದುಕಿನ ಭಾಗವಾಗಿವೆ ಮತ್ತು ಅದರ ಪ್ರಭಾವ ಪ್ರತಿಯೊಂದು ಮನೆಯಲ್ಲೂ ಚಲನಶೀಲತೆಯನ್ನು ಪಡೆದಿದೆ. ಮನುಷ್ಯನ ಭಾವನೆಯನ್ನು ವಿಘಟಿಸಿದೆ. ಕುಟುಂಬದಲ್ಲಿ ಸದಸ್ಯರ ಬಂಡವಾಳಕೇಂದ್ರಿತ ಸಂಬಂಧಗಳು, ದ್ವೇಷ, ಅಸೂಯೆ, ಕೊಲೆ, ಅನುಮಾನ, ಮೋಸ, ಮೌಲ್ಯರಹಿತವಾದ ಗಂಡು ಹೆಣ್ಣಿನ ಸಂಬಂಧ, ವಿಚ್ಛೇದನ, ಅತ್ತೆ–ಸೊಸೆಯ ಜಗಳ ಅವರ ಸೋಲು ಗೆಲುವಿನ ಹೋರಾಟಗಳು ನಮ್ಮ ಬದುಕಿನ ನಡೆಯಲ್ಲೂ ನಿಧಾನಕ್ಕೆ ಪ್ರವೇಶ ಪಡೆದು ಕುಟುಂಬದ ಆದರ್ಶವನ್ನು ಮಣ್ಣುಪಾಲು ಮಾಡಿಬಿಟ್ಟಿದೆ. ಕಟುಂಬದಲ್ಲಿಯೇ ಆದರ್ಶದ ಮಾದರಿಗಳು ಜೀವಂತಿಕೆಯನ್ನು ಪಡೆಯದೇ ಇರುವಾಗ ಮಕ್ಕಳ ಗುರಿ ಸಾಧನೆಯ ಮುಂದೆ ಆದರ್ಶದ ಮಾದರಿಗಳು ಗಟ್ಟಿಯಾಗಿ ನಿಲ್ಲುವುದಕ್ಕೆ ಸಾಧ್ಯವೇ?.

ನಾನು ಅದೆಷ್ಟೋ ಬಾರಿ ತರಗತಿಯಲ್ಲಿ ವಿದ್ಯಾರ್ಥಿಗಳಿಗೆ ಸ್ವಾತಂತ್ರ್ಯ ಹೋರಾಟಗಾರರ ಬಗ್ಗೆ, ಮಹಾತ್ಮರ ಬಗ್ಗೆ, ಮನುಕುಲದ ಉನ್ನತಿಗಾಗಿ ದುಡಿದ ಜೀವಗಳ ಬಗ್ಗೆ ಕೇಳುತ್ತೇನೆ, ಮಾತನಾಡುತ್ತೇನೆ. ಆದರೆ ಯಾವ ವಿದ್ಯಾರ್ಥಿಗಳಿಗೂ ಅದರ ಬಗ್ಗೆ ತಿಳುವಳಿಕೆಯಾಗಲಿ ಆಸಕ್ತಿಯಾಗಲಿ ಇಲ್ಲ. ಸ್ವಾತಂತ್ರ್ಯ ದಿನದ ಆಚರಣೆಯಂತಹ ಕಾರ್ಯಕ್ರಮಗಳಿಗೆ ಇಂದು ಮಕ್ಕಳನ್ನು ಕರೆಸುವುದು ಸಾಹಸದ ಕೆಲಸವಾಗಿದೆ. ನಮ್ಮ ಚಾರಿತ್ರಿಕ ಪರಂಪರೆಯನ್ನು ಮುಂದಿನ ಪೀಳಿಗೆಗೆ ದಾಟಿಸುವ ನೆಲೆಯಿಂದ ನಮ್ಮ ನೆಲದ ಸತ್ವವನ್ನು ಬರಿದಾಗದಂತೆ ಕಾಪಾಡುವ ಕಾರ್ಯವನ್ನು ಆದರ್ಶದ ಮಾದರಿಗಳು ನಮಗೆ ಅರಿವಿಲ್ಲದಂತೆ ಮಾಡುತ್ತಿದ್ದವು. ಈಗ ಅವುಗಳೆಲ್ಲ ಬಡವಾಗಿದೆ, ಸತ್ವರಹಿತವಾಗಿ ಮತ್ತು ಯಾರಿಗೂ ರುಚಿಸುವುದಿಲ್ಲ ಎನ್ನುವುದನ್ನು ನಾವೆಲ್ಲ ನಮ್ಮ ಮನಸ್ಸಿನ ಒಳಕ್ಕೆ ತೆಗೆದುಕೊಳ್ಳಬೇಕು. ನಮ್ಮ ಪಠ್ಯಗಳು ರಾಜಕೀಯದಿಂದ ಹೊರಬಂದು ಲೋಕದ ಆದರ್ಶವನ್ನು ನಿರೂಪಿಸುವ ಯೋಚನೆಯನ್ನು ಮಕ್ಕಳ ಮನಸ್ಸಿನಲ್ಲಿ ಬಿತ್ತುವ ಕಾರ್ಯವಾಗಬೇಕು ಆಗ ನಮ್ಮ ಬದುಕು ಬಲವಾಗುತ್ತದೆ. ಪರಿಸರದ ಪ್ರಜ್ಞೆ ಮೌಲ್ಯವನ್ನು ಪಡೆಯುತ್ತದೆ. ನಡೆ–ನುಡಿಗಳಿಂದ ಹಿಡಿದು ಜೀವ ಸಂಬಂಧಗಳಿಗೂ ಹೊಸರೂಪ ಬರುತ್ತದೆ. ನಾವು ಆಧುನಿಕ ಜೀವನ ಪರಂಪರೆಯಲ್ಲಿ ಕಳೆದುಕೊಂಡ ನೆಲದ ಸತ್ವವನ್ನು ಕಳೆದುಕೊಂಡಲ್ಲಿಯೇ ಹುಡುಕಿಕೊಂಡು ಜತನವಾಗಿಸಿಕೊಳ್ಳುವುದು ನಮ್ಮ ಈಗ ಅನಿವಾರ್ಯವಾಗಿದೆ.

# ಸಂಕ್ರಮಣ ಉತ್ತರಾಯಣ ಪುಣ್ಯ ಕಾಲ

**– ಪಲ್ಲವಿ ಚೆನ್ನಬಸಪ್ಪ** ಗುಡಿಹಳ್ಳಿ ಮಂಗಳೂರು

ಸಂಕ್ರಾಂತಿ ಎಂದರೆ ಸುಗ್ಗಿ ಹಬ್ಬ. ಗ್ರೆಗೋರಿಯನ್ ಕ್ಯಾಲೆಂಡರ್ ಪ್ರಕಾರ ವರ್ಷದ ಮೊದಲ ಹಬ್ಬ. ರೈತರ ಪಾಲಿಗೆ ಈ ಹಬ್ಬ ವಿಶೇಷ. ಬೆಳಿದಿರುವ ಬೆಳೆ ಕೊಯ್ಲಿಗೆ ಬಂದು, ಸುಗ್ಗಿ ಮಾಡುವ ಕಾಲ.



ಬಂದ ಧಾನ್ಯ ರಾಶಿ ಹಾಕಿ, ಪೂಜೆ ಮಾಡಿ, ಭೂದೇವಿಗೆ ಕೃತಜ್ಞತೆ ಅರ್ಪಿಸುವ ಸಂಪ್ರದಾಯವು ಇದೆ. ಪೂಜೆಯ ಪ್ರಸದಾರ್ಥವಾಗಿ, ನೆನೆಸಿಟ್ಟ ಅಕ್ಕಿಗೆ, ಬೆಲ್ಲ ಮತ್ತು ಕಾಯಿತುರಿ ಸೇರಿಸಿ ನೈವೇದ್ಯ ಮಾಡಿ ತಿನ್ನಲು ಕೊಡುತ್ತಾರೆ. ಇದರ ಹಿಂದೆಯೂ ವೈಜ್ಞಾನಿಕ ಕಾರಣ ಇವೆ..! ನಮ್ಮ ದೇಶದ ಆಚಾರ, ವಿಚಾರ, ಸಂಸ್ಕೃತಿ ಎಲ್ಲವೂ ವಿಭಿನ್ನ ಮತ್ತು ವಿಸ್ಮಯದ ಸಂಗತಿಗಳು. ಪ್ರತಿಯೊಂದು ಶುದ್ಧ ಆಚರಣೆಗಳ ಹಿಂದೆಯೂ, ಪ್ರಕೃತಿಪರ ಕಾಳಜಿ ಮತ್ತು ಜೀವಿಗಳ ಏಳ್ಗೆ, ಆರೋಗ್ಯಕರ ಜೀವನಕ್ಕೆ ಬೆಸೆದುಕೊಂಡಿರುವ ಕಾರಣಗಳಿರುತ್ತವೆ. ಅಂತೆಯೇ ಈ ಸಂಕ್ರಾಂತಿ ಹಬ್ಬದ ಹಿಂದೆಯೂ ಕಾರಣಗಳಿವೆ.

ದೇಶದಾದ್ಯಂತ ಆಚರಿಸುವ ಹಬ್ಬವಿದು. ಆದರೆ ಕರೆಯುವ ಹೆಸರುಗಳು ಬೇರೆಬೇರೆ. ವಿಭಿನ್ನತೆಯಲ್ಲಿ ಏಕತೆಯಂತೆ. ಸೂರ್ಯನು ಒಂದು ರಾಶಿಯಿಂದ ಮತ್ತೊಂದು ರಾಶಿಗೆ ಪ್ರವೇಶ ಮಾಡುವುದಕ್ಕೆ ಸಂಕ್ರಮಣ ಕಾಲ ಎನ್ನುತ್ತಾರೆ.

ಮಕರ ಸಂಕ್ರಾಂತಿ, ಉತ್ತರಾಯಣ, ಮಘಿ ಮೇಳ, ಪೊಂಗಲ್, ಮಾಗ್ ಬಿಹು, ಸಕ್ರತ್, ಲೋಹ್ರಿ.. ಹೀಗೆ ಅನೇಕ ಹೆಸರುಗಳು. ಜೊತೆಗೆ ಆಚರಣೆಯು ಕೊಂಚ ವಿಭಿನ್ನವೇ. ಹಿಂದೂ ಪಂಚಾಂಗದ ಪ್ರಕಾರ, ಪುಷ್ಯ ಮಾಸ ಶುಕ್ಲ ಪಕ್ಷ ದ್ವಾದಶಿಯಂದು ಈ ಹಬ್ಬವನ್ನು ಆಚರಿಸಲಾಗುತ್ತದೆ. ಇದಕ್ಕೆ. ಇದನ್ನು ಉತ್ತರಾಯಣ ಪುಣ್ಯ ಕಾಲ ಎನ್ನುತ್ತಾರೆ. ಸೂರ್ಯ ಪಥ ಬದಲಿಸಿ ಧನಸ್ಸು ರಾಶಿಯಿಂದ ಮಕರ



ರಾಶಿಗೆ ಪ್ರವೇಶಿಸುವ ಕಾಲ. ಸೂರ್ಯ ಭೂಮದ್ಯ ರೇಖೆಗೆ ಉತ್ತರಾಭಿಮುಖವಾಗಿ ಚಲಿಸುವ ಕಾಲ. ಈ ಸಮಯದಿಂದ ಆರು ತಿಂಗಳು, ಬೆಳಕಿನ ಸಮಯ ಹೆಚ್ಚು, ಮತ್ತು ಜೂನ್ ದಕ್ಷಿಣಯಣದಲ್ಲಿ ಬೆಳಕಿನ ಸಮಯ ಸ್ವಲ್ಪ ಕಡಿಮೆ ಇರುತ್ತದೆ. ಚಳಿ ಇನ್ನು ಕಮ್ಮಿಯಾಗುತ್ತ ಬರುವ ಸೂಚನೆ ಮತ್ತು, ಬೇಸಿಗೆ ಕಾಲ ಶುರುವಾಗುತ್ತ ಸೂರ್ಯನ ಪ್ರಖರತೆ ಹೆಚ್ಚಾಗುವ ಸಮಯ. ಪುರಾಣಗಳ ಪ್ರಕಾರ ಉತ್ತರಾಯಣ ದೇವತೆಗಳ ಸಮಯ ಮತ್ತು ದಕ್ಷಿಣಾಯಣ ಪಿತೃಗಳ ಕಾಲ ಎನ್ನುತ್ತಾರೆ. ಉತ್ತರಾಯಣ ಕಾಲಕ್ಕೆ ಸ್ವರ್ಗದ ಬಾಗಿಲು ತೆರೆದಿರುತ್ತದೆ ಎಂಬ ಉಲ್ಲೇಖಗಳು ಇವೆ. ಇದಕ್ಕೊಂದು ಉದಾಹರಣೆ ಅಂದರೆ, ಮಹಾಭಾರತದ ಭೀಷ್ಮ, ಯುದ್ಧ ಮಾಡಿ ಬಾಣಗಳ ಮೇಲೆ ಮಲಗಿದ್ದರು ಕೂಡ, ಉತ್ತರಾಯಣ ಬರುವವರೆಗೂ ಕಾದಿದ್ದು, ಉತ್ತರಾಯಣದಂದು ದೇಹ ತ್ಯಾಗ ಮಾಡುವುದು.

ಈ ಹಬ್ಬದಲ್ಲಿ ಎಳ್ಳು ಬೆಲ್ಲ, ಕೊಬ್ಬರಿ ಜೊತೆಗೆ ಕಬ್ಬು ಹಂಚಿ ತಿನ್ನುವುದು ಕರ್ನಾಟಕದಲ್ಲಿ ಹೆಚ್ಚು ಪ್ರಚಲಿತ. ಇದರ ಹಿಂದಿರುವ ವೈಜ್ಞಾನಿಕ ಕಾರಣ ನೋಡುವುದಾದರೆ, ಚಳಿಗಾಲದಲ್ಲಿ ಮೂಡಣದ ತಂಡಿ ಗಾಳಿಯ ತೀವ್ರತೆ ಹೆಚ್ಚು. ಇದರಿಂದ ದೇಹದ ಚರ್ಮವೆಲ್ಲ ಒಂದು ರೀತಿ ಒಣಗಿದಂತೆ ಆಗಿರುತ್ತದೆ ಮತ್ತು ಹೆಚ್ಚು ಚಳಿಯಿಂದ ಮೈಮನಕ್ಕೆಲ್ಲ ಜಡತ್ವ ಆವರಿಸಿಕೊಂಡಂತಾಗಿರುತ್ತದೆ. ಅಂತಹ ಸಮಯದಲ್ಲಿ, ನೈಸರ್ಗಿಕ ಜಿಡ್ಡು ಅಥವಾ ಎಣ್ಣೆ ಪದಾರ್ಥಗಳಿಂದ ಕೂಡಿದ, ಶೇಂಗಾ, ಕೊಬ್ಬರಿ, ಎಳ್ಳು, ಬೆಲ್ಲ ತಿನ್ನುವುದರಿಂದ, ದೇಹಕ್ಕೆ ಅಗತ್ಯವಿರುವ ಕೊಬ್ಬಿನ ಅಂಶ ಮತ್ತು ಕ್ಯಾಲ್ಸಿಯಂ ದೊರೆಯುತ್ತದೆ. ಇದರಿಂದ ಚರ್ಮಕ್ಕೂ ರಕ್ಷಣೆ ಸಿಗುತ್ತದೆ. ಹಂಚಿ ತಿನ್ನುವುದರಿಂದ ಬಾಂಧವ್ಯ ವೃದ್ಧಿ ಆಗುತ್ತದೆ. ಸುತ್ತಲಿರುವ ಬಂಧಗಳು ಚೆಂದವಾಗಿದ್ದಾಗ ಬದುಕು ಬಂಧನವೆನಿಸದೆ, ತೆಯ್ದ ಚಂದನವಾಗಿರುತ್ತದೆ ಅಲ್ಲವೇ ?

ಇನ್ನು ಶಾಸ್ತ್ರಗಳ ಪ್ರಕಾರ, ದಾನಕ್ಕೂ ಈ ಸಮಯದಲ್ಲಿ ಹೆಚ್ಚು ಮಹತ್ವವಿದೆ. ಸಂಕ್ರಮಣ ಕಾಲದಲ್ಲಿ ದಾನ ಮಾಡುವುದರಿಂದ, ಸೂರ್ಯದೇವನಿಗೆ ಸಂತೃಪ್ತಿಯಾಗುತ್ತದೆ. ಬಾಕಿ ದಿನಗಳಲ್ಲಿ ಮಾಡಿದ ದಾನಕ್ಕಿಂತ ಹೆಚ್ಚು ಫಲವಿದೆ ಎನ್ನುತ್ತಾರೆ. ನಮ್ಮ ಸಂಸ್ಕೃತಿ ರೂಪುಗೊಂಡಿರುವ ತಳಹದಿಯೇ, ಹೀಗೆ ಸಕಲ ಸೃಷ್ಟಿಯ ಹಿತ, ಮತ್ತು ಪಾರಮಾರ್ಥಿಕ ಜೀವನ ಜೀವಿಸುವ ಸಲುವಾಗಿ ಆಗಿರುವುದು. ಪ್ರತಿ ಆಚರಣೆಗಳ ಹಿಂದಿನ ಮಹತ್ವವನ್ನರಿತು ಪಾಲಿಸುತ್ತ, ಬಾಳಿನ ಸಾರ್ಥಕ್ಯದ ಹಾದಿಯಲ್ಲಿ ಸಾಗೋಣ.

ಈ ಸಂಕ್ರಾಂತಿಯು ಎಲ್ಲರ ಬದುಕಿನ ಸಂಕ್ರಮಣ ಕಾಲಕ್ಕೆ ಮುನ್ನುಡಿಯಾಗಲಿ... ಸಂಕ್ರಾಂತಿಯ ಶುಭಾಶಯಗಳು..

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

## ಕವಿ ಮನಸು

### ಸಂಕ್ರಾಂತಿ ಬಂದೈತೆ

ಸಂಕ್ರಾಂತಿಯು ಬಂದೈತೆ ಸುಗ್ಗಿಯ
ತಂದೈತೆ,
ಎಲ್ಲೆಲ್ಲೂ ಸಂಭ್ರಮವು ಮನೆಯ ಮಾಡೈತೆ
ಹೊತ್ತಾರೆ ಎಲ್ಲಾರ ಮನೆಮನ್ನು ಶುದ್ಧಾಗೈತೆ,
ಹಸಿರು ತೋರಣವು ಎಲ್ಲೆಲ್ಲೂ ಕಂಡೈತೆ.

ರಾಸುಗಳ ಮೈ ತೊಳೆದು ಸಿಂಗಾರವಾಗೈತೆ
ಕಿಚ್ಚನು ಹಾಯಿಸಲು ಎಲ್ಲಾ ಸಿದ್ಧವಾಗೈತೆ
ನೋಡಿ ಭೋಗಿಯ ಹಬ್ಬಾವೂ ಬಂದೈತೆ
ಹುಗ್ಗಿಯ ಮಾಡಿ ಸಗ್ಗಾದ ಸಿರಿಯ
ತಂದೈತಿ.

ಅಂಗಳದಿ ಚಂದಾದ ರಂಗೋಲಿ
ಬರೆದೇವ
ದವಸಧಾನ್ಯ ಕಬ್ಬುಕಡಲೆ ಸಿಹಿಗೆಣಸ
ಇಟ್ಟೇವ
ದೇವರಿಗೆ ನಮಿಸಿ ಹೊಸ ನೈವೇದ್ಯ
ಮಾಡ್ಯೇವಾ,
ಎಳ್ಳು ಬೆಲ್ಲವ ಬೀರುತಾ ಹಿರಿಹಿರಿ
ಹಿಗ್ಗೇವಾ.

ಪತಂಗಾವ ಹಾರಿಸಿ ಚಂದಾವ
ನೋಡ್ಯೇವಾ
ಎಳ್ಳುಬೆಲ್ಲ ತಿಂದು ಒಳ್ಳೊಳ್ಳೆ ಮಾತಾಡ್ಯೇವಾ,
ಸೂರ್ಯ ದೇವರ ಹಬ್ಬಾದಿ ಎಲ್ಲಾ
ನಲಿದೇವಾ,
ನೋವ ಮರೆತು ಎಲ್ಲಾ ಒಂದಾಗಿ
ಒಲಿದೇವಾ.

ಸಂಕ್ರಾಂತಿಯು ಬಂದೈತೆ ಸುಗ್ಗಿಯ
ತಂದೈತೆ,
ಎಲ್ಲೆಲ್ಲೂ ಸಂಭ್ರಮವು ಮನೆಯ ಮಾಡೈತೆ.

– ಮಮತಾ ಶೃಂಗೇರಿ

visit our website
www.hampitimes.com
epaper.hampitimes.com

# ಬದುಕು ಬದಲಾಯಿಸಿದ ವ್ಯಾಯಾಮ ವಜ್ರದೇಹಿ ಚೇತನ್ ಕೋಡಪ್ಪ

ಚೇತನ್ ಕೆ.ಎನ್.ಕಡೂರು ತಾಲೂಕು ಚಿಕ್ಕಮಗಳೂರು ಜಿಲ್ಲೆಯ ನಂಜುಂಡಪ್ಪ,ನಾಗಮ್ಮ ಕೃಷಿಕ ದಂಪತಿಗಳಿಗೆ ಜನಿಸಿದ ಸ್ಥಳೀಯ ಅಂತರರಾಷ್ಟ್ರೀಯ ದೇಹದಾಢ್ಯಪಟು.

3ನೇ ತರಗತಿಯಲ್ಲಿ ವಿದ್ಯಾಭ್ಯಾಸ ಮಾಡುವಾಗ ಕಡೂರಿನ ಮಾರುತಿ ವ್ಯಾಯಾಮ ಶಾಲೆಯಲ್ಲಿ(ಗರಡಿ ಮನೆ)ದೇಹ ಸದೃಢವಾಗಿರಿಸಿಕೊಳ್ಳಲು ತೊಡಗಿಸಿಕೊಳ್ಳುತ್ತಾರೆ. ಖ್ಯಾತ ಸಿನಿಮಾ ನಟ ಟೈಗರ್ ಪ್ರಭಾಕರ್ ಅವರ ಸಿನಿಮಾಗಳನ್ನು ನೋಡಿ ನಾನು ಅವರಂತೆ ದೇಹವನ್ನು ಹೊಂದಬೇಕೆಂಬ ಕಾರಣದಿಂದ ಹಾಗೂ ಮುಂದೆ ಅರ್ನಾಲ್ಡ್ ರವರ ಸಿನಿಮಾಗಳನ್ನು ವೀಕ್ಷಿಸಿ ದೇಹದಾಢ್ಯಪಟುವಾಗುವ ಕಡೆ ಒಲವು ತೋರಿಸುತ್ತಾರೆ ಇವರುಗಳೇ ಇವರಿಗೆ ಪ್ರೇರಣೆ.

ದೇಹದಾಢ್ಯಪಟು ಕೇವಲ ವ್ಯಾಯಾಮ ಮಾಡಿದರೆ ಸಾಲದು, ಪೌಷ್ಟಿಕ ಆಹಾರ ಮುಖ್ಯ, ಕೃಷಿ ಕುಟುಂಬವಾದ ಕಾರಣ ಸ್ವಂತ ಜಮೀನಿನಲ್ಲಿಯೇ ತರಕಾರಿ, ಸೊಪ್ಪುಗಳನ್ನು ಬೆಳೆದು ಸೇವಿಸುತ್ತಿದ್ದರು.ಮನೆ ಮನೆಗೆ ಪೇಪರ್, ಹಾಲು ಹಾಕುವ ಕೆಲಸವನ್ನು ಮಾಡಿ ಹಣ್ಣು ಹಂಪಲುಗಳನ್ನು ತಿನ್ನಲು ಹಣ ಹೊಂದಿಸಿಕೊಳ್ಳುತ್ತಿದ್ದರು.

1–7ನೇ ತರಗತಿವರೆಗೆ ಕೆವಿಎಚ್ ಪಿಎಸ್, 8–10ನೇ ತರಗತಿವರೆಗೆ ಧ್ರುವತಾರೆ ಪ್ರೌಢಶಾಲೆ, ಪ್ರಥಮ ಹಾಗೂ ದ್ವಿತೀಯ ಪಿಯುಸಿಯನ್ನು ಜಿಜೆಸಿ ಕಡೂರು ಹಾಗೂ ಜಿ ಎಫ್ ಜಿ ಸಿ ಕಾಲೇಜಿನಲ್ಲಿ ಬಿಎ ಪದವಿ ಪಡೆದಿರುತ್ತಾರೆ.



ಡಾ.ಸುಧಾಕರ ಜಿ.ಲಕ್ಕವಳ್ಳಿ
ಲೇಖಕರು 8747969381

Scan For Digital Colourful
HAMPI TIMES E-paper

ಕಡೂರು ತಾಲೂಕಿಗೆ ಮೊಟ್ಟ ಮೊದಲ ಕಂಚಿನ ಪದಕ ದೇಹದಾಢ್ಯ ಸ್ಪರ್ಧೆಯಲ್ಲಿ ದೊರಕಿದ್ದು ಇವರ ಕ್ರೀಡಾ ಕೆರಿಯರ್ನಲ್ಲಿ ಟರ್ನಿಂಗ್ ಪಾಯಿಂಟ್ ಅದು 2008 ಆಗಸ್ಟ್ 10ನೇ ತಾರೀಕು ಕುವೆಂಪು ಕಲಾಮಂದಿರದಲ್ಲಿ ದೇಹದಾಢ್ಯ ಸ್ಪರ್ಧೆ ಆಯೋಜಿಸಲಾಗಿತ್ತು ಅಲ್ಲಿ ಸ್ಪರ್ಧಿಸಿ ಬಹುಮಾನ ಗೆಲ್ಲಲು ಪ್ರಮುಖ ಕಾರಣ ಇವರ ತರಬೇತುದಾರರಾದ ಜಿಮ್ ಶ್ರೀನಿವಾಸ್ ರವರು. ಇವರ ಸಾಧನೆಯನ್ನು ಗಮನಿಸಿ ಶಾಸಕರಾದ ಕೆ,ಎಮ್. ಕೃಷ್ಣಮೂರ್ತಿ ರವರು ಸಾಧಕನನ್ನು ಸನ್ಮಾನಿಸಿ, ಗೌರವಿಸಿ ಚಿಕ್ಕಮಗಳೂರು ಯುವ ಸಬಲೀಕರಣ ಇಲಾಖೆಯವರ ಸಹಕಾರದೊಂದಿಗೆ ಸರ್ಕಾರಿ ವ್ಯಾಯಾಮ ಶಾಲೆಯನ್ನು ಕಡೂರಿ ನಲ್ಲಿ ನಿರ್ಮಿಸಿದ್ದು ಈಗ ಇತಿಹಾಸ ಇದಕ್ಕೆ ಪ್ರಮುಖ ಕಾರಣ ಚೇತನ್ ರವರ ಸಾಧನೆ.

ಸಾಗರದ ಸಂತೋಷ್, ಭದ್ರಾವತಿಯ ಸಂದೀಪ್ ಇವರ ಮಾರ್ಗದರ್ಶನ ಹಾಗೂ ಆಹಾರ ಕ್ರಮದ ವಿಧಾನಗಳನ್ನು ಅನುಸರಿಸುತ್ತಾ ಪ್ರಸ್ತುತ ರಾಷ್ಟ್ರೋತ್ಥಾನ ಫಿಟ್ನೆಸ್ ಸಂಸ್ಥೆಯ ತರಬೇತುದಾರರಾದ ಹರೀಶ್ ಕೃಷ್ಣಪ್ಪ ಬೆಂಗಳೂರು ಇವರ ಪ್ರಮುಖ ಮಾರ್ಗದರ್ಶನದೊಂದಿಗೆ ತರಬೇತಿಯನ್ನು ಪಡೆಯುತ್ತಿದ್ದು ಅಂತರಾಷ್ಟ್ರೀಯ ಮಟ್ಟದಲ್ಲಿ ಭಾರತಕ್ಕೆ ಪದಕವನ್ನು ತರಲು ಆರ್ಥಿಕವಾಗಿ ಸಹಕಾರದ ನಿರೀಕ್ಷೆಯಲ್ಲಿದ್ದಾರೆ.

### ಕ್ರೀಡಾ ಸಾಧನೆಗಳು

2024 ಥಾಯ್ಲ್ಯಾಂಡ್ ಪಟಾಯದಲ್ಲಿ ನಡೆದ ಡಬ್ಲ್ಯೂ ಬಿ ಎಫ್ ನ್ಯಾಚುರಲ್ ವಿಭಾಗದ ಅಂತರರಾಷ್ಟ್ರೀಯ ದೇಹದಾಢ್ಯ ಸ್ಪರ್ಧೆಯಲ್ಲಿ ಚಿನ್ನದ ಪದಕ ಮತ್ತು 90+ ದ್ವಿತೀಯ ಸ್ಥಾನ.

2024 ಡಿಸೆಂಬರ್ 21ರಂದು ಮಲೇಶಿಯಾದಲ್ಲಿ ನಡೆದ ಅಂತರಾಷ್ಟ್ರೀಯ ದೇಹದಾಢ್ಯ ಸ್ಪರ್ಧೆಯಲ್ಲಿ ಕ್ಲಾಸಿಕ್ ವಿಭಾಗದಲ್ಲಿ ಐದನೇ, 90+ವಿಭಾಗದಲ್ಲಿ ತೃತೀಯ ಸ್ಥಾನ.

ಉದಯಪುರ 2011, ತಮಿಳುನಾಡು 2012, 2013 ಗಳಲ್ಲಿ ನಡೆದ ರಾಷ್ಟ್ರಮಟ್ಟದ ಆಲ್ ಇಂಡಿಯಾ ಇಂಟರ್ ಯುನಿವರ್ಸಿಟಿ ದೇಹದಾಢ್ಯ ಸ್ಪರ್ಧೆಗಳಲ್ಲಿ ಭಾಗವಹಿಸಿದ್ದಾರೆ.

ಬೆಂಗಳೂರಿನಲ್ಲಿ ನಡೆದ 2011ರ ಸೌತ್ ನ್ಯಾಷನಲ್ ಬಾಡಿ ಬಿಲ್ಡಿಂಗ್ ಸ್ಪರ್ಧೆಯಲ್ಲಿ ತೃತೀಯ ಸ್ಥಾನ, ಕೇರಳ ತ್ರಿವೇಂಡ್ರಮ್ ನಲ್ಲಿ ನಡೆದ 2013ರ ಸೌತ್ ನ್ಯಾಷನಲ್ ಬಾಡಿ ಬಿಲ್ಡಿಂಗ್ ಕಾಂಪಿಟೇಶನ್ ನಲ್ಲಿ ತೃತೀಯ ಬಹುಮಾನ,2009 ಶಿವಮೊಗ್ಗ ಬಾಡಿ ಬಿಲ್ಡಿಂಗ್ ಅಸೋಸಿಯೇಷನ್ ಅವರು ನಡೆಸಿದ ಸ್ಪರ್ಧೆಯಲ್ಲಿ 75 ಕೆಜಿ ವಿಭಾಗದಲ್ಲಿ ಚಿನ್ನದ ಪದಕದೊಂದಿಗೆ ಮೋಸ್ಟ್ ಮಸ್ಕ್ಯುಲರ್ ಟೈಟಲ್ ಪಡೆದಿರುತ್ತಾರೆ.

2009 ಐಬಿಬಿಎಫ್ ವತಿಯಿಂದ ಧಾರವಾಡದಲ್ಲಿ ನಡೆದ ದೇಹದ ಸ್ಪರ್ಧೆಯಲ್ಲಿ ಭಾಗವಹಿಸಿ 75 ಕೆಜಿ ವಿಭಾಗದಲ್ಲಿ ತೃತೀಯ ಸ್ಥಾನ.

2008 ಕುವೆಂಪು ವಿಶ್ವವಿದ್ಯಾನಿಲಯದಲ್ಲಿ ನಡೆದ ಅಂತರ ಕಾಲೇಜು ದೇಹದಾರ್ಢ್ಯ ಸ್ಪರ್ಧೆಯಲ್ಲಿ 70 ಕೆಜಿ ವಿಭಾಗದಲ್ಲಿ ತೃತೀಯ ಸ್ಥಾನ.

2015 ತೆಲಂಗಾಣದಲ್ಲಿ ನಡೆದ ರಾಷ್ಟ್ರೀಯ ದೇಹದಾಢ್ಯ ಸ್ಪರ್ಧೆಯಲ್ಲಿ ತೃತೀಯ ಸ್ಥಾನ.

ಇದರ ಜೊತೆಗೆ 2009 ಮಿಸ್ಟರ್ ಚಿಕ್ಕಮಗಳೂರು,2009 ಬೆಸ್ಟ್ ಪೋಜರ್ ಶಿವಮೊಗ್ಗ,2001 ಬೆಸ್ಟ್ ಪೋಜರ್ ಚಿಕ್ಕಮಗಳೂರು,2013 ಚಾಂಪಿಯನ್ ಆಫ್ ಚಾಂಪಿಯನ್ ಚಿಕ್ಕಮಗಳೂರು,2013 ಮಿಸ್ಟರ್ ಬೆಂಗಳೂರು ಉದಯ ಮತ್ತು ಚಾಂಪಿಯನ್ ಆಫ್ ಚಾಂಪಿಯನ್ 2013 ಮಿಸ್ಟರ್ ಕುವೆಂಪು ಯುನಿವರ್ಸಿಟಿ ಮತ್ತು ಚಾಂಪಿಯನ್ ಆಫ್ ಚಾಂಪಿಯನ್ ಇದರೊಟ್ಟಿಗೆ ಇನ್ನೂ ಹಲವಾರು ಟೈಟಲ್ಗಳನ್ನು ಪಡೆದಿರುತ್ತಾರೆ.



ಕ್ರೀಡೆಯಲ್ಲಿ ಸಾಧನೆಯನ್ನು ಮಾಡಬೇಕಾದರೆ ಕೌಟುಂಬಿಕ ಸಮಸ್ಯೆಗಳನ್ನು ಬದಿಗಿಟ್ಟು ತರಬೇತಿಯನ್ನು ಪಡೆಯಬೇಕಾಗುತ್ತದೆ ಅದಕ್ಕೆ ಸಹಕಾರಿಯಾಗಿ ನನ್ನ ಸಂಪೂರ್ಣ ಕುಟುಂಬ ಜೊತೆಗಿದೆ ಎನ್ನುತ್ತಾರೆ ಚೇತನ್.

ಸರ್ಕಾರ ಈಗಾಗಲೇ ಕ್ರೀಡಾಪಟುಗಳಿಗೆ ಉದ್ಯೋಗದಲ್ಲಿ ಮೀಸಲಾತಿಯನ್ನು ನೀಡಿದೆ ಆದರೆ ಅದು ಒಟ್ಟಾರೆ ಕ್ರೀಡೆಗಳಿಗೆ ನೀಡಿದೆ ವೈಯಕ್ತಿಕವಾಗಿ ಪ್ರತಿ ಕ್ರೀಡೆಗೆ ಪ್ರೋತ್ಸಾಹ ಸರಿಹೊಂದುವಂತೆ ಮೀಸಲಾತಿ ನೀಡಬೇಕೆಂದು ಕೇಳಿಕೊಳ್ಳುತ್ತಾರೆ.

ಕ್ರೀಡೆಗಳಲ್ಲಿ ಅತ್ಯುನ್ನತ ಸ್ಥಾನಮಾನ ಗಳಿಸಲು ತಾಳ್ಮೆ, ಸ್ಥಿರತೆ ಮತ್ತು ತಪಸ್ಸು ಮಾಡಬೇಕು ಅಂದರೆ ಕನಿಷ್ಠ 5 ರಿಂದ 6 ವರ್ಷ ತರಬೇತಿ ಅವಶ್ಯ, ನಾನು ಈ ಸ್ಥಾನಕ್ಕೆ ಬರಲು 16 ವರ್ಷಗಳ ಶ್ರಮ ಇದೆ ಇಂದು ಸಿನಿಮಾಗಳಲ್ಲಿ ಅವಕಾಶ ದೊರೆತು ನಟಿಸಲು ಕಾರಣ ಕ್ರೀಡೆ ಎಂದು ಹೆಮ್ಮೆಯಿಂದ ಹೇಳುತ್ತಾರೆ.

ಇಂದಿನ ಕೆಲ ಯುವಕರು ಮೊಬೈಲ್ ಹಾಗೂ ಕೆಲವೊಂದು ದುಶ್ಚಟಗಳಿಗೆ ಬಲಿಯಾಗುತ್ತಿದ್ದಾರೆ ಇವುಗಳನ್ನು ತೊರೆದು ಯಾವುದಾದರು ಒಂದು ಕ್ರೀಡೆಯಲ್ಲಿ ತೊಡಗಿ, ಬೇಕರಿ ಪದಾರ್ಥಗಳು ಹಾಗೂ ಕೆಮಿಕಲ್ಯುಕ್ತ ರಸ್ತೆ ಬದಿಯ ಆಹಾರಗಳನ್ನು ತಪ್ಪಿಸಿ ಇದರಿಂದ ಯಾವುದೇ ಕಾರಣಕ್ಕೂ ಉತ್ತಮ ಆರೋಗ್ಯವನ್ನು ಪಡೆಯಲು ಸಾಧ್ಯವಿಲ್ಲ ಎನ್ನುತ್ತಾರೆ.

ಬಾಡಿ ಬಿಲ್ಡಿಂಗ್ ದುಬಾರಿ ಕ್ರೀಡೆ ಇದಕ್ಕೆ ಸಾಕಷ್ಟು ಆರ್ಥಿಕ ನೆರವು ಅಗತ್ಯ ಜೊತೆಗೆ ಸರಿಯಾದ ತರಬೇತಿ ಬೇಕು ಯಾವುದೇ ಭ್ರಮೆಯಿಂದ ನೀವು ತರಬೇತುದಾರರನ್ನ ದೂರ ಬೇಡಿ

ಯಾವುದೋ ಶಾರ್ಟ್ ಕಟ್ ಅನುಸರಿಸಿ ಪ್ರಾಣ ಕಳೆದುಕೊಳ್ಳಬೇಡಿ ತೊಂದರೆಗೆ ಮಾರ್ಗದರ್ಶಕರು ಹೊಣೆಯಲ್ಲ ಎನ್ನುತ್ತಾರೆ ಚೇತನ್.

ಮಹಿಳೆಯರು ಆರೋಗ್ಯದ ಕಡೆಗೆ ಹೆಚ್ಚಿನ ಗಮನಹರಿಸಿ

ತಾವುಗಳು ಸರಿಯಾದ ಆರೋಗ್ಯವನ್ನು ಹೊಂದಿದ್ದರೆ ಮುಂದೆ ಜನಿಸುವ ಮಕ್ಕಳು ಸದೃಢರಾಗಿ ದೇಶಕ್ಕೆ ಕೊಡುಗೆ ನೀಡುತ್ತಾರೆ.

ಕನಿಷ್ಠ ಪ್ರತಿದಿನ 30 ನಿಮಿಷಗಳ ವಾಕಿಂಗ್ ಅಥವಾ ಸಣ್ಣಪುಟ್ಟ ವ್ಯಾಯಾಮಗಳನ್ನು ಮಾಡಿ ದೇಶಕ್ಕೆ ಕೊಡುಗೆ ನೀಡಿ ಎಂದು ತಾಯಂದಿರಲ್ಲಿ ವಿನಂತಿಸುತ್ತಾರೆ.


# ಸುಗ್ಗಿ ಹಬ್ಬ ಮಕರ ಸಂಕ್ರಾಂತಿ

ಸೂರ್ಯನು ಧನು ರಾಶಿಯಿಂದ ಮಕರ ರಾಶಿಗೆ ಪ್ರವೇಶಿಸುವ ದಿನವನ್ನು ಮಕರ ಸಂಕ್ರಾಂತಿ ಎಂದು ಕರೆಯಲಾಗುತ್ತದೆ. ಈ ದಿನವನ್ನು ಹಿಂದುಗಳು ಸಂಕ್ರಾಂತಿಯ ಹಬ್ಬವೆಂದು ಆಚರಿಸುತ್ತಾರೆ. ಸೂರ್ಯನು ತನ್ನ ಪಥವನ್ನು ದಕ್ಷಿಣಾಯಣದಿಂದ ಉತ್ತರಾಯಣದ ಕಡೆಗೆ ಬದಲಿಸುವ ದಿನವನ್ನು ದೇಶದಾದ್ಯಂತ ವಿವಿಧ ಹೆಸರಿನಲ್ಲಿ ವಿವಿಧ ಸಂಪ್ರದಾಯದಲ್ಲಿ ಹಬ್ಬವನ್ನು ಆಚರಿಸಿ ಸಂಭ್ರಮಿಸುತ್ತಾರೆ. ಈ ಕಾಲವನ್ನು ಉತ್ತರಾಯಣ ಪರ್ವಕಾಲವೆಂದೂ ಕರೆಯುತ್ತಾರೆ.

ಉತ್ತರಾಯಣ ಪರ್ವಕಾಲವೆಂದರೆ ಸೂರ್ಯನು ಭೂಮಧ್ಯ ರೇಖೆಯಿಂದ ಉತ್ತರಾಭಿಮುಖವಾಗಿ ಚಲಿಸುವ ಕಾಲ. ಉತ್ತರಾಯಣ ಕಾಲದಲ್ಲಿ ಭಗವಂತನ ವಿಶೇಷವಾದ ಅನುಗ್ರಹವಿರುತ್ತದೆ ಎಂದು ನಂಬಲಾಗುತ್ತದೆ.

ಪುರಾಣದ ಪ್ರಕಾರ, ಕೃತಯುಗದಲ್ಲಿ ಶಿವ ಮತ್ತು ಪಾರ್ವತಿಯರ ವಿವಾಹವಾಗಿದ್ದು, ಬ್ರಹ್ಮದೇವನು ಈ ಜಗತ್ತಿನ ಸೃಷ್ಟಿಯನ್ನು ಪ್ರಾರಂಭಿಸಿದ್ದು, ಇಂದ್ರನಿಗೆ ಗೌತಮರು ಶಾಪ ವಿಮೋಚನೆ ಮಾಡಿದ್ದು, ಸಮುದ್ರ ಮಥನದಲ್ಲಿ ಮಹಾಲಕ್ಷ್ಮಿ ಅವತರಿಸಿದ್ದು, ನಾರಾಯಣನು ವರಾಹ ಅವತಾರದಿಂದ ಭೂಮಿಯ ಮೇಲೆ ಪಾದಸ್ಪರ್ಶ ಮಾಡಿದ್ದು, ಋಷಿಮುನಿಗಳು ತಪಸ್ಸಿಗೆ ಆಯ್ಕೆ ಮಾಡಿಕೊಂಡಿದ್ದು ಈ ಉತ್ತರಾಯಣದಲ್ಲಿ. ಹಾಗಾಗಿ ಉತ್ತರಾಯಣ ಕಾಲದಲ್ಲಿ ಭಗವಂತನ ವಿಶೇಷ ಅನುಗ್ರಹವಿರುತ್ತದೆ ಎಂದು ಹೇಳಲಾಗುತ್ತದೆ.

ಶ್ರೀ ಕೃಷ್ಣನು ಭಗವದ್ಗೀತೆಯಲ್ಲಿ ಆಯಣದಲ್ಲಿ ಉತ್ತರಾಯಣ ಅತಿ ಶ್ರೇಷ್ಠ ಎಂದು ಹೇಳಿದ್ದಾನೆ. ಈ ಸಮಯದಲ್ಲಿ ಮರಣ ಹೊಂದಿದವರು ನೇರವಾಗಿ ಸ್ವರ್ಗಕ್ಕೆ ಹೋಗುತ್ತಾರೆ ಎಂಬ ನಂಬಿಕೆ ಇದೆ ಭೀಷ್ಮ ಪಿತಾಮಹರು ಶರಶೈಯೆಯಲ್ಲಿ ಮಲಗಿ ಯಮ ಯಾತನೆಯನ್ನು ಅನುಭವಿಸುತ್ತಿದ್ದರೂ ದಕ್ಷಿಣಾಯಣದಲ್ಲಿ ದೇಹವನ್ನು ತ್ಯಜಿಸಲು ಒಪ್ಪದೇ, ಉತ್ತರಾಯಣ ಪುಣ್ಯಕಾಲದಲ್ಲಿಯೇ ತಮ್ಮ ದೇಹವನ್ನು ತ್ಯಜಿಸಿದರು.



ಚೇತನ ಭಾರ್ಗವ
ಬೆಂಗಳೂರು ಹವ್ಯಾಸಿ ಬರಹಗಾರ್ತಿ

Scan For Digital Colourful
HAMPI TIMES E-paper

ರೈತರು ತಾವು ಹೊಲದಲ್ಲಿ ಬೆಳೆದ ಧಾನ್ಯಗಳನ್ನು ಕಣದಲ್ಲಿ ರಾಶಿ ಹಾಕಿ, ಪೂಜೆ ಮಾಡಿ, ಧಾನ್ಯಗಳನ್ನು ಮನೆ ಒಳಗೆ ತಂದು ಹೊಸ ಅಕ್ಕಿ ಬೇಳೆಗಳಲ್ಲಿ ಪೊಂಗಲ್ ಹುಗ್ಗಿಯನ್ನು ತಯಾರಿಸಿ, ದೇವರಿಗೆ ನೈವೇದ್ಯ ಮಾಡಿ ಹೊಸ ಫಸಲನ್ನು ಬಂಧು ಬಾಂಧ ವರೊಂದಿಗೆ ಸವಿಯುತ್ತಾರೆ. ರೈತಾಪಿ ಜನರು ಸಮೃದ್ಧಿಯ ಸಂಕೇತವೇ ಸಂಕ್ರಾಂತಿ ಎಂದು ಸಡಗರದಿಂದ ಸುಗ್ಗಿ ಹಬ್ಬವನ್ನು ಆಚರಿಸುತ್ತಾರೆ.

ಗ್ರಾಮೀಣ ಪ್ರದೇಶದಲ್ಲಿ ಸಂಕ್ರಾಂತಿಯ ದಿನದಂದು ರೈತರು ಎತ್ತು ದನ ಕರುಗಳಿಗೆ ಮೈ ತೊಳಿಸಿ ಅಲಂಕರಿಸಿ ಕೆಂಡದ ಮೇಲೆ ಅವುಗಳನ್ನು ಓಡಿಸುವ ಸಾಂಪ್ರದಾಯಿಕ ಆಚರಣೆಯನ್ನು ಮಾಡುತ್ತಾರೆ ಮಕ್ಕಳು ಗಾಳಿಪಟಗಳನ್ನು ಹಾರಿಸಿ ಸಂಭ್ರಮಿಸುತ್ತಾರೆ. ಮಾರ್ಗಶಿರ ಮಾಸದ ಕೊರೆವ ಚಳಿಗೆ ನಮ್ಮ ದೇಹದ ಚರ್ಮವು



ಒಡೆದು ಕಾಂತಿಯನ್ನು ಕಳೆದುಕೊಂಡಿರುತ್ತದೆ. ಎಳ್ಳಿನ ಸೇವನೆಯೂ ನಮ್ಮ ದೇಹಕ್ಕೆ ಬೇಕಾಗುವ ಶಾಖ ಮತ್ತು ಶಕ್ತಿಯನ್ನು ಒದಗಿಸುತ್ತದೆ. ಹಾಗಾಗಿ ಸ್ನೇಹಿತರಿಗೆ ಸಂಬಂಧಿಕರಿಗೆ ಎಳ್ಳು ಬೆಲ್ಲವನ್ನು ಕೊಟ್ಟು ಒಳ್ಳೆಯ ಮಾತನಾಡಿ ಎಂದು ಹೇಳುತ್ತಾ, ಕಬ್ಬು ಮತ್ತು ಬಾಳೆಹಣ್ಣಿನೊಂದಿಗೆ ಎಳ್ಳು ಬೆಲ್ಲವನ್ನು ನೀಡುತ್ತಾ ಹೆಂಗಳೆಯರು ಸಂಕ್ರಾಂತಿ ಹಬ್ಬವನ್ನು ಆಚರಿಸುತ್ತಾರೆ. ಎಳ್ಳಿನೊಂದಿಗೆ ಕಡಲೆ ಬೀಜ ಹುರಿಗಡಲೆ ಕೊಬ್ಬರಿಯನ್ನು ಮಿಶ್ರಣ ಮಾಡಿರುತ್ತಾರೆ. ಇದರಲ್ಲಿ ಚಳಿಗಾಲದ ಸಮಯದಲ್ಲಿ ನಮ್ಮ ದೇಹಕ್ಕೆ ಬೇಕಾಗುವ ಹೆಚ್ಚಿನ ಪ್ರೋಟೀನ್ ಅಂಶವು ಇರುತ್ತದೆ ಹಾಗೂ ಶೀತ ವಾತ ಆಲಸ್ಯವನ್ನು ದೂರ ಮಾಡುತ್ತದೆ.

ಭಾರತದ ದೇಶದಾದ್ಯಂತ ವಿವಿಧ ಹೆಸರುಗಳಲ್ಲಿ ಮಕರ ಸಂಕ್ರಾಂತಿಯನ್ನು ಆಚರಿಸುತ್ತಾರೆ. ಕರ್ನಾಟಕ, ತೆಲಂಗಾಣ ಹಾಗೂ ಒಡಿಸ್ಸಾದಲ್ಲಿ ಮಕರ ಸಂಕ್ರಾಂತಿಯೆಂದೂ, ಗುಜರಾತಿನಲ್ಲಿ ಉತ್ತರಾಯಣಯೆಂದೂ, ಹಿಮಾಚಲ ಪ್ರದೇಶ ಪಂಜಾಬ್ ನಲ್ಲಿ ಮಾಘಿ, ಉತ್ತರ ಪ್ರದೇಶ ಕಿಚೇರಿ, ಪಶ್ಚಿಮ ಬಂಗಾಳ ತ್ರಿಪುರದಲ್ಲಿ ಪೌಶ್ ಸಂಕ್ರಾಂತಿ, ಬಿಹಾರದಲ್ಲಿ ದಹಿ ಚುರಾ,ಕೇರಳದಲ್ಲಿ ಮಕರವಿಳಕ್ಕು, ಆಂಧ್ರಪ್ರದೇಶದಲ್ಲಿ ಪೆದ್ದ ಪಾಂಡುರಂಗ, ತಮಿಳುನಾಡಿನಲ್ಲಿ ಪೊಂಗಲ್ ಎಂದು ಕರೆಯುತ್ತಾರೆ. ಕರ್ನಾಟಕದಲ್ಲಿ ಸುಗ್ಗಿ ಹಬ್ಬ ವೆಂದೂ ಕರೆಯುತ್ತಾರೆ.

ಸೂರ್ಯನು ಧನು ರಾಶಿಯಿಂದ ಮಕರ ರಾಶಿಗೆ ಪ್ರವೇಶಿಸುವ ಸಂದರ್ಭದಲ್ಲಿ ಆಕಾಶದಲ್ಲಿ ಬೆಳಗುವ ನಕ್ಷತ್ರವೇ ಮಕರ ಜ್ಯೋತಿ. ಮಕರ ಜ್ಯೋತಿ ಆಕಾಶದಲ್ಲಿ ಕಾಣಿಸುವ ನಕ್ಷತ್ರ ಎಂದು ಹೇಳಲಾಗುತ್ತದೆ. ಈ ನಕ್ಷತ್ರವು ಸೂರ್ಯಾಸ್ತದ ನಂತರ ಕಾಣಿಸಿ ಸ್ವಲ್ಪ ಸಮಯದ ನಂತರ ಕಣ್ಮರೆಯಾಗುತ್ತದೆ. ಅದು ಮಕರ ಮಾಸದ ಮೊದಲ ದಿನದಂದು ಉದಯಿಸಿದ ನಕ್ಷತ್ರ. ಈ ಶುಭದಿನದಂದು ಮಕರ ಜ್ಯೋತಿ ರೂಪದಲ್ಲಿ ಅಯ್ಯಪ್ಪ ಸ್ವಾಮಿ ಭಕ್ತರಿಗೆ ದರ್ಶನ ನೀಡಿ ಶಬರಿಯಲ್ಲಿ ನೆಲೆಯಾಗುತ್ತಾನೆ ಎಂಬ ನಂಬಿಕೆ ತಲತಲಾಂತರದಿಂದ ಇಂದಿಗೂ ಇದೆ. ಮಕರ ಜ್ಯೋತಿಯನ್ನು ನೋಡಲು ಶಬರಿಮಲೆಗೆ ಲಕ್ಷಾಂತರ ಭಕ್ತಾದಿಗಳು ದೇಶದ ವಿವಿಧ ಕಡೆಯಿಂದ ಬಂದು ಸೇರುತ್ತಾರೆ.

## SSLC ಈ ಬಾರಿ ಫಲಿತಾಂಶ ನಮ್ಮದೆ ಹೈಸ್ಕೋರ್‌ಗೆ

HAMPI TIMES MARGADARSHI
ಈಗಿಂದಲೇ ಪುನರ್ಮನನ ಮಾಡಿ
ಪರೀಕ್ಷೆಗೆ ನಾವು ಸಿದ್ಧ 66 ದಿನ
https://epaper.hampitimes.com
ಮನಸ್ಸು ಮಾಡು-ಕರ್ತವ್ಯ ನಿಷ್ಟನಾಗು-ಕಾದು ನೋಡು

ನಿನ್ನ ಏಳಿಗೆಗೆ ನೀನೇ ಶಿಲ್ಪಿ
ಹಂಪಿ ಟೈಮ್ಸ್ ಮಾರ್ಗದರ್ಶಿ SSLC: ಕನ್ನಡ

### ಕನ್ನಡ– ವ್ಯಾಕರಣ
### ದ್ವಿರುಕ್ತಿಗಳು

**1. ದ್ವಿರುಕ್ತಿ ಎಂದರೇನು ?**
ಉತ್ತರ– ಒಂದು ವಿಶೇಷ ಅರ್ಥವನ್ನು ವ್ಯಕ್ತಪಡಿಸುವುದಕ್ಕಾಗಿ ಒಂದು ಪದವನ್ನೋ ಅಥವಾ ಒಂದು ವಾಕ್ಯವನ್ನೋ ಅವಕಾಶ ಅಥವಾ ಬಿಡುವು ಇಲ್ಲದೆ ಎರಡು ಸಲ ಪ್ರಯೋಗಿಸುವುದನ್ನು ದ್ವಿರುಕ್ತಿ ಎನ್ನುವರು. (ದ್ವಿ =ಎರಡು, ಉಕ್ತಿ = ಮಾತು)

**ದ್ವಿರುಕ್ತಿಯನ್ನು ಬಳಸುವ ಸಂದರ್ಭಗಳು**

1. ಉತ್ಸಾಹ– ಹೌದು ಹೌದು ನಾನೇ ಗೆದ್ದೆ , ನಿಲ್ಲು ನಿಲ್ಲು ನಾನು ಬರುವೆ, ಬಂದೆ ಬಂದೆ.
2. ಅದಿಕ್ಯ – ದೊಡ್ಡ ದೊಡ್ಡ ಹಣ್ಣುಗಳು , ಹೆಚ್ಚು ಹೆಚ್ಚು ಜನ.
3. ವೀಪ್ಸೆ (ಪ್ರತಿಯೊಂದು) – ಮನೆ ಮನೆ ಮನೆ ಗಣತಿ, ಕೇರಿ ಕೇರಿಗಳಲ್ಲಿ ಅಲೆದರು, ಊರೂರು ತಿರುಗು.
4. ಕೋಪ– ಎಲಾ ಮೂರ್ಖ ನಿಲ್ಲು ನಿಲ್ಲು, ಎಲೇ ಎಲೇ ಹೋಗಬೇಡ.
5. ಸಂಭ್ರಮ– ಬನ್ನಿ ಬನ್ನಿ ಕುಳಿತುಕೊಳ್ಳಿ, ಹತ್ತಿರ ಹತ್ತಿರ ಬಾ.
6. ಆಶ್ಚರ್ಯ– ಅಬ್ಬಬ್ಬಾ ! ಎಂಥ ರಮ್ಯ ದೃಶ್ಯ, ಅಹಹಾ ! ಅವನ ಆಟ ಅದ್ಭುತ.
7. ಅಕ್ಷೇಪ– ಬೇಡ ಬೇಡ ಕೊಡಬೇಡ, ನಡೆ ನಡೆ ಸುಮ್ಮನೆ.
8. ಹರ್ಷ– ಅಮ್ಮಾ ಅಮ್ಮಾ, ಇದು ನಾನು ಬರೆದ ಪುಸ್ತಕ.
9. ಸಮ್ಮತಿ( ಒಪ್ಪಿಗೆ) –ಆಗಲಿ ಆಗಲಿ ನೀವು ಬಂದುದು ಸಂತೋಷ.
10. ತ್ವರೆ (ಅವಸರ)– ಬೇಗ ಬೇಗ ಓಡು, ನಡೆ ನಡೆ ಬೇಗ, ಓಡು ಓಡು.
11. ದುಃಖ– ಅಯ್ಯೋ ಅಯ್ಯೋ, ಹೀಗೆಕಾಯಿತು? ದೇವರೇ ದೇವರೇ ಇನ್ನೂ ಏನು ಗತಿ.
12. ಆವೃತ್ತಿ– ನೋಡಿ ನೋಡಿ ನಕ್ಕನು.
13. ಭಯ– ಹಾವು ಹಾವು, ಕೆಟ್ಟೆ ಕೆಟ್ಟೆ, ಬೆಂಕಿ ಬೆಂಕಿ.
14. ಭರ್ತ್ಸನ – ದುರುಳಾದುರುಳಾ, ಇದು ಲಾಕ್ಷಾಗೇಹಕ್ಕಿದು, ವಿಷಮವಿಷನ್ನಾಕ್ಕಿದು, ಪೆಣ್ಣು ಪೆಣ್ಣೆಂದೇತಕೆ ಬೀಳುಗಳೆವರು.
15. ಪ್ರಾರ್ಥನೆ– ಚಿಲಿ ಮಿಲಿ ಎಂದೋದುವ ಗಿಳಿಗಳಿರ ನೀವು ಕಾಣಿರೇ ನೀವು ಕಾಣಿರೇ.
16. ನಿಷೇಧ– ಸಾಕು ಸಾಕು.

**ದ್ವಿರುಕ್ತಿಯಲ್ಲಿ ಬರುವ ಕೆಲವು ವಿಶೇಷ ರೂಪಗಳು**

ಮೊದಲು ಮೊದಲು= ಮೊತ್ತ ಮೊದಲು/ ಮೊಟ್ಟ ಮೊದಲು.
ಕಡೆಗೆ ಕಡೆಗೆ= ಕಟ್ಟ ಕಡೆಗೆ/ ಕಡೆ ಕಡೆಗೆ
ನಡುವೆ ನಡುವೆ= ನಟ್ಟ ನಡುವೆ/ ನಡು ನಡುವೆ
ಬಯಲು ಬಯಲು= ಬಟ್ಟ ಬಯಲು
ತುದಿ ತುದಿ= ತುತ್ತತುದಿ
ಕೊನೆಗೆ ಕೊನೆಗೆ= ಕೊನೆ ಕೊನೆಗೆ
ಮೆಲ್ಲನೆ ಮೆಲ್ಲನೆ= ಮೆಲ್ಲ ಮೆಲ್ಲನೆ

www.hampitimes.com - Hampi Times Margadarshi

### ಜೋಡು ನುಡಿಗಳು

**1. ಜೋಡುನುಡಿ ಎಂದರೇನು ?**
ಉತ್ತರ– ವಿರುದ್ಧಾರ್ಥಕವಾದ ಎರಡು ಪದಗಳನ್ನೋ ಅಥವಾ ಬೇರೆ ಬೇರೆ ಅರ್ಥಗಳುಳ್ಳ ಪದಗಳನ್ನೋ ಒಟ್ಟಿಗೆ ಬಳಸಿದರೆ ಅದನ್ನು ಜೋಡುನುಡಿ ಎನ್ನುವರು. ಅಭಿಪ್ರಾಯಗಳನ್ನು ಒತ್ತಿ ಹೇಳುವುದಕ್ಕೂ, ವಿವಿಧತೆಯನ್ನು ಸೂಚಿಸುವುದಕ್ಕೂ ಇಂತಹ ಪದಗಳನ್ನು ಬಳಸಲಾಗುತ್ತದೆ. ಇವುಗಳಲ್ಲಿ ಎರಡು ವಿಧ.
1. ಎರಡು ಪದಗಳಿಗೆ ಬೇರೆ ಬೇರೆ ಅರ್ಥವಿರುವುದು.
2. ಎರಡು ಪದಗಳಲ್ಲಿ ಮೊದಲ ಪದಕ್ಕೆ ನಿರ್ದಿಷ್ಟ ಅರ್ಥವಿದ್ದು, ಎರಡನೆಯ ಪದಕ್ಕೆ ಅರ್ಥವಿಲ್ಲದಿರುವುದು (ಇದನ್ನು' ಮಾತಿಗೊಂದು ಗೀತು' ಎಂದು ಸಹ ಎನ್ನುವರು)

**ಉದಾಹರಣೆ –**
1. ಎರಡೂ ಪದಗಳಿಗೆ ಬೇರೆ ಬೇರೆ ಅರ್ಥವಿರುವುದು.
ಸತಿಪತಿ ಕೆನೆ ಮೊಸರು ಹಾಲ್ಬೇನು ಮಕ್ಕಳು ಮರಿ ಮನೆ–ಮಠ ಆಟ– ಪಾಠ ಓದು– ಬರಹ ನಗು– ಅಳು ಕಾಡು– ಮೇಡು ಹುಟ್ಟು– ಸಾವು ಬಡವ– ಬಲ್ಲಿದ ಹಿಂದು– ಮುಂದು ಕಲ್ಲು– ಮುಳ್ಳು.
2. ಎರಡು ಪದಗಳಲ್ಲಿ ಮೊದಲ ಪದಕ್ಕೆ ನಿರ್ದಿಷ್ಟ ಅರ್ಥವಿದ್ದು, ಎರಡನೆಯ ಪದಕ್ಕೆ ಅರ್ಥವಿಲ್ಲದಿರುವುದು. (ಇದನ್ನು' ಮಾತಿಗೊಂದು ಗೀತು' ಎಂದು ಸಹ ಎನ್ನುವರು.
ಉದಾಹರಣೆ–ಕಾಫೀಗೀಫಿ, ಹುಳ ಹುಪ್ಪಡಿ, ದೇವರುಗೀವರು.

### ಅನುಕರಣಾವ್ಯಯಗಳು

ಅರ್ಥವಿಲ್ಲದ ಧ್ವನಿ ವಿಶೇಷಗಳನ್ನು ಕೇಳಿದಂತೆ, ಪುನಃ (ಉಚ್ಚಾರಣೆ) ಅನುಕರಣೆ ಮಾಡಿ ಹೇಳುವ ಶಬ್ದಗಳು ಅನುಕರಣಾವ್ಯಯ ಗಳೆನಿಸುವುವು.
**ಉದಾಹರಣೆ–** ಸರಸರ, ಗುಳುಗುಳು, ಥರಥರ, ದಪ ದಪ, ಚಟ ಚಟ, ಧಗ ಧಗ, ಚುರುಚುರು, ಸುಯ್ಯನೆ, ಬೋರನೆ, ದಿಗ್ಗನೆ, ಜುಳು ಜುಳು, ಧುಮ್ಮನೆ, ಧಡಲ್ ಇತ್ಯಾದಿ.



"ಇಂದಿನ ಪರಿಶ್ರಮವೇ ನಾಳಿನ ಯಶಸ್ಸು"

ಮಾರ್ಗದರ್ಶಿ ಶಿಕ್ಷಕರು : ಶ್ರೀ ಮಧು. ಕೆ. ಕನ್ನಡ ಭಾಷಾ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ ಸೂಲದಹಳ್ಳಿ. ಕೂಡ್ಲಿಗಿ (ತಾ)

ಸಾಯಿಮಣಿ ಪ್ರಕಾಶನ, ಹೊಸಪೇಟೆ

• Admissions
• Requirements
• Firm Branding
• Public Notice
• Change of Name


BOOK NOW!

Book Your Advertisements in Leading Local HAMPI TIMES Print & Digital News Paper

9482599089 / 9448633038

• Obituary
• Remembrance
• Birthday wish ads
• Events Display &
• Classified ads

SHUBHA Ads C/o HAMPI TIMES, Bamboo Bazaar, Nr Valmiki Circle, Hosapete-583201 Vijayanagara Dist.



## ತುಂಗಭದ್ರಾ ನೀರಿನ ಮಟ್ಟ

ಸೋಮವಾರ : 13-01-2025

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1623.34 ಅಡಿ |
| ಒಳ ಹರಿವು | 0 ಕ್ಯೂಸೆಕ್ |
| ಹೊರ ಹರಿವು | 10198 ಕ್ಯೂಸೆಕ್ |
| ಇಂದಿನ ಸಾಮರ್ಥ್ಯ | 71.202 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| ಕಳೆದ ವರ್ಷ ಇದೇ ದಿನ | |
| ಇಂದಿನ ಮಟ್ಟ | 1588.96 ಅಡಿ |
| ಒಳ ಹರಿವು | 0 ಕ್ಯೂಸೆಕ್ |
| ಹೊರ ಹರಿವು | 0 ಕ್ಯೂಸೆಕ್ |
| ಸಾಮರ್ಥ್ಯ | 10.182 ಟಿಎಂಸಿ |

## ನಿತ್ಯ ಪಂಚಾಂಗ

ಮಾಸ: ಪುಷ್ಯ । ಸಂವತ್ಸರ: ಕ್ರೋಧಿ

14-01-2025 – ಮಂಗಳವಾರ

| | |
|---|---|
| ತಿಥಿ | : ಪ್ರಥಮ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಪುನರ್ವಸು |
| ಯೋಗ | : ವಿಷ್ಕುಂಭ |
| ಕರಣ | : ಬಾಳವ |
| ಸೂರ್ಯೋದಯ | : 07:11:39 |
| ಸೂರ್ಯಾಸ್ತ | : 18:00:38 |
| ರಾಹು ಕಾಲ | : 15:18–16:40 |
| ಯಮಘಂಡ ಕಾಲ | : 09:54–11:15 |
| ಗುಳಿಕ ಕಾಲ | : 12:36–13:57 |

# ಪ್ರಾಣ ರಕ್ಷಣೆಗೆ ವಾಹನದ ವೇಗ ತಗ್ಗಿಸಿ

### ಮೋಟಾರು ವಾಹನ ನಿರೀಕ್ಷಕ ಪ್ರಭಾಕರ ಎನ್ ಹೇಳಿಕೆ । ಸ್ವಯಂ ಜಾಗೃತಿ ಕುಟುಂಬಕ್ಕೆ ನೆಮ್ಮದಿ ತರಬಲ್ಲದು




■ ಹಂಪಿ ಟೈಮ್ಸ್ ಕೊಪ್ಪಳ

ಎಲ್ಲ ವಾಹನ ಚಾಲಕರು ರಸ್ತೆ ಸುರಕ್ಷತೆಗೆ ಮೊದಲ ಆದ್ಯತೆ ನೀಡಬೇಕು. ವೇಗದ ಮಿತಿ ಹಾಗೂ ಚಾಲನೆಯ ಇತಿಮಿತಿಗಳನ್ನು ಅರ್ಥ ಮಾಡಿಕೊಳ್ಳ ಬೇಕು. ಕಾರು ಚಲಾಯಿಸು ವಾಗ ಕಡ್ಡಾಯವಾಗಿ ಸೀಟ್ ಬೆಲ್ಟ್ ಧರಿಸಿ, ನಿಧಾನಿಸಿದರೆ ಅನೇಕ ಅಪಘಾತ ಗಳನ್ನು ತಪ್ಪಿಸಲು ಸಾಧ್ಯ ಎಂದು ಹಿರಿಯ ಮೋಟಾರು ವಾಹನ ನಿರೀಕ್ಷಕ ಪ್ರಭಾಕರ ಎನ್ ಹೇಳಿದರು.

ಪ್ರಾದೇಶಿಕ ಸಾರಿಗೆ ಕಚೇರಿ ಇಲ್ಲಿನ ಹೊಸಪೇಟೆ ರಸ್ತೆಯ ಆರ್.ಟಿ.ಓ.ಚಾಲನಾ ಪರೀಕ್ಷೆ ಆವರಣದಲ್ಲಿ ಸೋಮವಾರ ಪ್ರಾದೇಶಿಕ ಸಾರಿಗೆ ಅಧಿಕಾರಿ ಲಕ್ಷ್ಮೀಕಾಂತ ನಾಲವಾರ ನೇತೃತ್ವದಲ್ಲಿ ಹಮ್ಮಿಕೊಂಡಿದ್ದ ರಸ್ತೆ ಸುರಕ್ಷತೆ ಜನಜಾಗೃತಿ ಕಾರ್ಯಮದಲ್ಲಿ ಮಾತನಾಡಿದರು. ವಾಹನಗಳು ಮನೋರಂಜನೆಯ ಸಾಧನಗಳಲ್ಲ, ಪ್ರತಿಯೊಬ್ಬ ಸವಾರರು ರಸ್ತೆ ನಿಯಮ ಅರಿತು ವಾಹನ ಚಲಾಯಿಸಿದರೆ ತನ್ನ ಪ್ರಾಣ ರಕ್ಷಣೆಯ ಜೊತೆಗೆ ಕುಟುಂಬಕ್ಕು ನೆಮ್ಮದಿ ತರಬಹುದು ಎಂದರು.

ಹಿರಿಯ ಮೋಟಾರು ವಾಹನ ನಿರೀಕ್ಷಕ ಮಂಜುನಾಥ ಪ್ರಸಾದ ಮಾತನಾಡಿ, ನಾವು ತೆರಳಬೇಕಾದ ಸ್ಥಳಕ್ಕೆ ನಿಗದಿತ ಅವಧಿಯೊಳಗೆ ತಲುಪಲು ವೇಗವಾಗಿ ವಾಹನ ಚಾಲನೆ ಮಾಡಬಾರದು, ನಿಧಾನವಾಗಿ ಜಾಗರೂಕತೆಯಿಂದ ಚಾಲನೆ ಮಾಡಬೇಕು. ನಿರ್ದಿಷ್ಟ ಸಮಯಕ್ಕೆ ತಲುಪಲು ಸ್ವಲ್ಪ ಮುಂಚಿತವಾಗಿ ಹೊರಡುವ ಮನೋಭಾವ ರೂಢಿಸಿಕೊಳ್ಳಬೇಕು. ರಸ್ತೆ ಸುರಕ್ಷತೆ ಬಗ್ಗೆ ಯುವಜನರಲ್ಲಿ ಹೆಚ್ಚು ಜಾಗೃತಿ ಮೂಡಿಸು ವುದು ಅಗತ್ಯವಾಗಿರುವ ಹಿನ್ನೆಲೆಯಲ್ಲಿ ಕಾಲೇಜು ಗಳಿಗೆ ತೆರಳಿ ವಿದ್ಯಾರ್ಥಿ ಗಳಲ್ಲಿ ಅರಿವು ಮೂಡಿಸ ಲಾಗುವುದು ಎಂದರು.

ಬೆಂಗಳೂರಿನ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಜಂಟಿ ನಿರ್ದೇಶಕ ಮಂಜು ನಾಥ ಡಿ.ಡೊಳ್ಳಿನ ಮಾತನಾಡಿ, ರಸ್ತೆ ಸುರಕ್ಷತೆ ಜಾಗೃತಿಗಾಗಿ ಪ್ರಾದೇಶಿಕ ಸಾರಿಗೆ ಇಲಾಖೆ ಸೇರಿದಂತೆ ಸರ್ಕಾರದ ವಿವಿಧ ಇಲಾಖೆಗಳು ನಿರಂತರವಾಗಿ ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸುತ್ತಿವೆ. ನೀವು ರಸ್ತೆಯ ಹಿರೋಗಳಾಗಿ ಎಂಬ ಘೋಷವಾಕ್ಯದಡಿ ಈ ಬಾರಿ ರಸ್ತೆ ಸುರಕ್ಷತೆ ಮಾಸಾಚರಣೆ ಮಾಡಲಾಗುತ್ತಿದೆ. ಪ್ರತಿಯೊಬ್ಬರು ಸಾರಿಗೆ, ಸಂಚಾರ ನಿಯಮಗಳನ್ನು ಅರಿತು ಅಳವಡಿಸಿಕೊಂಡು, ಕಟ್ಟು ನಿಟ್ಟಾಗಿ ಪಾಲಿಸಿದರೆ ರಸ್ತೆ ಸುರಕ್ಷತೆಯನ್ನು ಪರಿಣಾಮ ಕಾರಿಗೊಳಿಸಲು ಸಾಧ್ಯ ಎಂದರು. ಪ್ರಾದೇಶಿಕ ಸಾರಿಗೆ ಕಚೇರಿ ಅಧೀಕ್ಷಕ ನರಸಪ್ಪ ಸೇರಿದಂತೆ ವಾಹನ ಚಾಲಕರು, ಸವಾರರು, ಸಾರ್ವಜನಿಕರು ಕಾರ್ಯಕ್ರಮದಲ್ಲಿ ಭಾಗವಹಿ ಸಿದ್ದರು.

## ಜಾತಿಗಣತಿ ವರದಿಯನ್ನು ಕೂಡಲೆ ಜಾರಿಗೊಳಿಸುವಂತೆ ಸಿಪಿಐ ಒತ್ತಾಯ




■ ಹಂಪಿ ಟೈಮ್ಸ್ ಕೂಡ್ಲಿಗಿ

ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಕಾಂತರಾಜು ನೇತೃತ್ವದಲ್ಲಿ ನಡೆದ ಜಾತಿಗಣತಿ ಸಮೀಕ್ಷೆಯನ್ನು ಈ ಕೂಡಲೇ ಬಿಡುಗಡೆ ಗೊಳಿಸಲು ಸಿಪಿಐ ಪಕ್ಷದ ರಾಜ್ಯ ಕಾರ್ಯದರ್ಶಿ ಸಾತಿ ಸುಂದರೇಶ್ ಅವರು ಒತ್ತಾಯಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಭಾನುವಾರ ನಡೆದ ಪ್ರತಿಕಾಗೋಷ್ಠಿಯಲ್ಲಿ ಮಾತನಾಡಿದರು. ಜಾತಿಗಣತಿ ವರದಿ ಅವೈಜ್ಞಾನಿಕ ಎಂದು ಕೆಲ ಸಮುದಾಯಗಳು ವಿರೋಧಿಸುತ್ತಿವೆ. ರಾಜ್ಯ ಬೊಕ್ಕಸದ ಹಣ ಖರ್ಚು ಮಾಡಿ ನಡೆಸಿದ ಸಮೀಕ್ಷೆಯನ್ನು ಯಾವುದೇ ಕಾರಣಕ್ಕೂ ವಿಳಂಬಮಾಡದೆ, ಬಿಡುಗಡೆ ಮಾಡಬೇಕು ಎಂದರು.

ಸಿಪಿಐ ರಾಜ್ಯ ಸಹಕಾರ್ಯದರ್ಶಿ ಅಮ್ಜದ್ ಖಾನ್ ಮಾತನಾಡಿ, ಬಿಪಿಎಲ್ ಕಾರ್ಡಗಳನ್ನು ರದ್ದುಪಡಿಸುವ ಮೂಲಕ ಬಡವರ ಅನ್ನಕ್ಕೂ ಸಿದ್ದರಾಮಯ್ಯನವರ ಸರ್ಕಾರ ಕೈ ಹಾಕುವುದನ್ನು ನಾವು ವಿರೋದಿಸುತ್ತೇವೆ. ಈ ಕೂಡಲೇ ರದ್ದುಪಡಿಸಿರುವ ಕಾರ್ಡುಗಳನ್ನು ಪುನಃ ಸಕ್ರೀಯಗೊಳಿಸ ಬೇಕು ಎಂದರು. ಸಿಪಿಐ ಪಕ್ಷವು ಡಿಸೆಂಬರ್ 2025ರಂದು 100 ವರ್ಷ ಗಳನ್ನು ಆಚರಿಸಿಕೊಳ್ಳುವ ಸಂಭ್ರಮದಲ್ಲಿದೆ. ಸಿಪಿಐ ಪಕ್ಷವು ವಿದ್ಯಾರ್ಥಿ, ಯುವ ಸಮುದಾಯ, ಮಹಿಳಾ, ರೈತವರ್ಗ, ಕೃಷಿ ಕೂಲಿ ಕಾರ್ಮಿಕ, ಸಂಘಟಿತ, ಅಸಂಘಟಿತ ಕಾರ್ಮಿಕ ವಲಯಗಳಿಗೆ ಸೇರಿದಂತೆ ಸಮ ಸಮಾಜಕ್ಕೆ ಹಗಲಿರಳು ಶ್ರಮವಹಿಸುತ್ತಿದೆ. ಸಿಪಿಐ ರಾಷ್ಟ್ರೀಯ ಕಾರ್ಯದರ್ಶಿ ಹಾಗೂ ಮಾಜಿ ಎಂ.ಪಿ. ಅಜೀಜ್ ಬಾಷ ಮಾತನಾಡಿದರು. ಎಐಆರ್‌ಡಿಎಂ ರಾಜ್ಯ ಅಧ್ಯಕ್ಷ ಡಾ. ಜನಾರ್ದನ, ಎಐಕೆಎಸ್ ರಾಜ್ಯ ಅಧ್ಯಕ್ಷರು ಡಾ. ಸಿದ್ದನಗೌಡ ಪಾಟೀಲ್, ಎಐವೈಎಫ್ ರಾಜ್ಯ ಪ್ರಧಾನ ಕಾರ್ಯದರ್ಶಿ ಸಂತೋಷ್ ಕುಮಾರ್, ವಿಜಯನಗರ ಜಿಲ್ಲಾ ಕಾರ್ಯದರ್ಶಿ ಹೆಚ್. ವೀರಣ್ಣ, ತಾಲೂಕು ಕಾರ್ಯದರ್ಶಿ ಕರಿಯಪ್ಪ ಇದ್ದರು.

# ಶ್ರೀ ಗವಿಸಿದ್ದೇಶ್ವರ ಜಾತ್ರೆಗೆ ಹೆಚ್ಚುವರಿ ಸಾರಿಗೆ ಸೌಲಭ್ಯ

■ ಹಂಪಿ ಟೈಮ್ಸ್ ಕೊಪ್ಪಳ

ಶ್ರೀ ಗವಿಸಿದ್ದೇಶ್ವರ ಜಾತ್ರೆಯ ಪ್ರಯುಕ್ತ ಭಕ್ತಾದಿಗಳಿಗಾಗಿ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ ಕೊಪ್ಪಳ ವಿಭಾಗ ದಿಂದ ಹೆಚ್ಚುವರಿ ಸಾರಿಗೆ ಸೌಲಭ್ಯವನ್ನು ಕಲ್ಪಿಸಲಾಗಿದೆ. ಕೊಪ್ಪಳದಲ್ಲಿ ಜನವರಿ 15 ರಿಂದ ಜ. 29 ರವರೆಗೆ ನಡೆಯಲಿರುವ ಶ್ರೀಗವಿ ಸಿದ್ದೇಶ್ವರ ಜಾತ್ರಾ ಮಹೋತ್ಸವ ಹಿನ್ನೆಲೆ ಯಲ್ಲಿ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ಕುಷ್ಟಗಿ, ಗಂಗಾವತಿ, ಯಲಬುರ್ಗಾ, ಗದಗ, ಮುಂಡರಗಿ, ಹೊಸಪೇಟೆ ಇನ್ನೂ ಮುಂತಾದ ಸ್ಥಳಗಳಿಗೆ ಹೆಚ್ಚುವರಿ ಸಾರಿಗೆ ಸೌಲಭ್ಯ ವನ್ನು ಕಲ್ಪಿಸಲಾಗಿರುತ್ತದೆ. ಭಕ್ತಾದಿಗಳು ಈ ಸಾರಿಗೆಯ ಸೌಲಭ್ಯವನ್ನು ಪಡೆದು ಕೊಳ್ಳುವಂತೆ ಕ.ಕ.ರ.ಸಾ.ನಿಗಮ ಕೊಪ್ಪಳ ವಿಭಾಗದ ವಿಭಾಗೀಯ ನಿಯಂತ್ರಣಾ ಧಿಕಾರಿಗಳು ತಿಳಿಸಿದ್ದಾರೆ

14 ಭಾಷೆಗಳಲ್ಲಿ
ಹಂಪಿ ಟೈಮ್ಸ್ ವೆಬ್‌ನ್ಯೂಸ್‌ಗೆ
ಭೇಟಿ ನೀಡಿ, ನಿಮ್ಮ ಮಾತೃಭಾಷೆಯಲ್ಲಿ ಸುದ್ದಿ, ಲೇಖನ ಓದಿರಿ...
www.hampitimes.com

## ಜ.15 ರಂದು ಅಸ್ಮಿತೆ ವಸ್ತು ಪ್ರದರ್ಶನ, ಮಾರಾಟ ಮೇಳ ಉದ್ಘಾಟನೆ

ಹಂಪಿ ಟೈಮ್ಸ್ ಕೊಪ್ಪಳ

ಬೆಂಗಳೂರಿನ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಹಾಗೂ ರಾಷ್ಟ್ರೀಯ ಜೀವನೋಪಾಯ ಅಭಿಯಾನ ಮತ್ತು ಕೊಪ್ಪಳ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಕೌಶಲ್ಯ ಮಿಷನ್ ಇವರ ಸಹಯೋಗದಲ್ಲಿ ಶ್ರೀ ಗವಿಸಿದ್ಧೇಶ್ವರ ಜಾತ್ರಾ ಮಹೋತ್ಸವ-2025ರ ಪ್ರಯುಕ್ತ ಜಾತ್ರಾ ಆವರಣದಲ್ಲಿ ಹಮ್ಮಿಕೊಳ್ಳಲಾದ 'ಅಸ್ಮಿತೆ' ವಸ್ತು ಪ್ರದರ್ಶನ ಮತ್ತು ಮಾರಾಟ ಮೇಳದ ಉದ್ಘಾಟನಾ ಕಾರ್ಯಕ್ರಮವು ಜನವರಿ 15 ರಂದು ಬೆಳಿಗ್ಗೆ 11ಕ್ಕೆ ನಡೆಯಲಿದೆ.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ತಂಗಡಗಿ ಶಿವರಾಜ ಸಂಗಪ್ಪ ಅವರು ಕಾರ್ಯಕ್ರಮವನ್ನು ಉದ್ಘಾಟಿಸುವರು. ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಸಚಿವರಾದ ಡಾ.ಶರಣಪ್ರಕಾಶ ಆರ್ ಪಾಟೀಲ್ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಸಚಿವರಾದ ಪ್ರಿಯಾಂಕ್ ಖರ್ಗೆ, ಕರ್ನಾಟಕ ವಿಧಾನಸಭೆಯ ವಿರೋಧ ಪಕ್ಷದ ಮುಖ್ಯ ಸಚೇತಕರು ಹಾಗೂ ಕುಷ್ಟಗಿ ಶಾಸಕರಾದ ದೊಡ್ಡನಗೌಡ ಹನುಮಗೌಡ ಪಾಟೀಲ ಮತ್ತು ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರರು ಹಾಗೂ ಯಲಬುರ್ಗಾ ಶಾಸಕರಾದ ಬಸವರಾಜ ರಾಯರಡ್ಡಿ ಅವರು ಕಾರ್ಯಕ್ರಮದ ಘನ ಉಪಸ್ಥಿತಿ ವಹಿಸುವರು. ಕೊಪ್ಪಳ ಶಾಸಕರಾದ ಕೆ.ರಾಘವೇಂದ್ರ ಹಿಟ್ನಾಳ ಅವರು ಅಧ್ಯಕ್ಷತೆ ವಹಿಸುವರು.

# ಚಿಂತಾಮಣಿ ಮಠದಲಿ ಶತಕಂಠ ಗಾಯನ

### ಕುಮಾರವ್ಯಾಸ ಮತ್ತು ಸ್ವಾಮಿ ವಿವೇಕಾನಂದರ ಜಯಂತಿ ಆಚರಣೆ



■ ಹಂಪಿ ಟೈಮ್ಸ್ ಹೊಸಪೇಟೆ

ನಗರದ ಅಮರಾವತಿಯ ಚಿಂತಾಮಣಿ ಮಠದಲ್ಲಿ ಭಾನುವಾರ ಕುಮಾರವ್ಯಾಸ ಜಯಂತಿ ಹಾಗೂ ಸ್ವಾಮಿ ವಿವೇಕಾ ನಂದರ ಜಯಂತಿಯನ್ನು ಆಚರಿಸ ಲಾಯಿತು.

ಶ್ರೀ ಶ್ರೀ ಶಿವಾನಂದ ಭಾರತಿ ಸ್ವಾಮಿಗಳ ಸಾನಿಧ್ಯದಲ್ಲಿ ಕುಮಾರವ್ಯಾಸ ಭಾರತದ ಪದ್ಯವನು 100 ಜನ ಸಂಗೀತ ಆಸಕ್ತರು ಸೇರಿ ಶತಕಂಠ ಗಾಯನ ಮಾಡಿದರು. ಇಡೀ ಕರ್ನಾಟಕದಲ್ಲಿಯೇ ಮೊದಲ ಬಾರಿಯಾಗಿದ್ದು ವಿಜಯನಗರ ಜಿಲ್ಲೆಗೆ ಹೆಗ್ಗಳಿಕೆಯಾಗಿದೆ. ಈ ಸಂದರ್ಭದಲ್ಲಿ ಪಾಶು ಪತಾಸ್ತ್ರ ಪ್ರಧಾನ ಪ್ರಸಂಗ ಕುರಿತು ಗಮಕ ಗಾಯನ ವ್ಯಾಖ್ಯಾನ ಎಲ್ಲರನ್ನು ಮಂತ್ರಮುಗ್ಧರನ್ನಾಗಿಸಿತು. ಮುಖ್ಯ ಅತಿಥಿಗಳಾಗಿ ರಂಗುಪಂತ್ ನಾಗರಾಜ ರಾವ್, ಗುರುಬಸವರಾಜ್ ಹೆಚ್. ಎಂ., ನಾಗರಾಜ್ ಹವಲ್ದಾರ್ ಮತ್ತು ಪಕ್ಕಿರಪ್ಪ ವಜ್ರಬಂಡಿ ಉಪಸ್ಥಿತರಿದ್ದರು. ಜಿಲ್ಲೆಯ ಗಮಕ ಅಧ್ಯಕ್ಷರಾದ ಪಲ್ಲವಿಭಟ್ ಅವರ ನೇತೃತ್ವದಲ್ಲಿ ಕಾರ್ಯಕ್ರಮ ಸಾಂಗೋಪಾಂಗವಾಗಿ ನಡೆಯಿತು ಎಂದು ಆಯೋಜಕರು ತಿಳಿಸಿದರು.



ಹೊಸಪೇಟೆ ನಗರಸಭೆ ನೌಕರ ಮಂಜುನಾಥ್ ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಎಫ್‌ಐಆರ್ ದಾಖಲಿಸಿಕೊಂಡ ಹಂಪಿ ಠಾಣೆ ಪೊಲೀಸರು, ನಗರಸಭೆಗೆ ಸೋಮವಾರ ಭೇಟಿ ನೀಡಿ ದಾಖಲೆ ಪರಿಶೀಲನೆ ನಡೆಸಿದ್ದಾರೆ. ಹಂಪಿ ಸಿಪಿಐ ರಾಜೇಶ್ ಭಟಗುರ್ಕಿ, ಪಿಎಸ್ ಐ ಶಿವಕುಮಾರ್ ನಾಯ್ಕ್ ದಾಖಲಾತಿ ಪರಿಶೀಲನೆ ನಡೆಸಿದರು. ಹೊಸಪೇಟೆ ನಗರಸಭೆ ಪ್ರಭಾರಿ ಪೌರಾಯುಕ್ತರು ಇದ್ದರು.

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಕನ್ನಡ ದಿನಪತ್ರಿಕೆ



# ಹಂಪಿ ಉತ್ಸವ

## ಫೆ.28, ಮಾ.1-2 | 2025

## ಉತ್ಸವ ಹೇಗಿರಬೇಕು? ನೀವು ಬರೆದು ಕಳುಹಿಸಿ

ಹಂಪಿ ಉತ್ಸವದ ರೂವಾರಿ **ದಿ.ಎಂ.ಪಿ.ಪ್ರಕಾಶ** ಅವರ ಆಶಯದಂತೆ ಹಂಪಿ ಉತ್ಸವ ಆಚರಿಸಲು ಜಿಲ್ಲಾ ಉಸ್ತುವಾರಿ ಸಚಿವ **ಬಿ.ಝಡ್.ಜಮೀರ್ ಅಹ್ಮದ್ ಖಾನ್** ಉತ್ಸುಕರಾಗಿದ್ದಾರೆ. ಅದಕ್ಕೆ ಪೂರಕವಾಗಿ ಈಬಾರಿಯ ಹಂಪಿ ಉತ್ಸವ ಆಚರಣೆಗೆ ಈಗಾಗಲೇ ಜಿಲ್ಲಾಡಳಿತದಿಂದ ಸಿದ್ಧತೆಗಳು ಚುರುಕುಗೊಂಡಿರುವುದು ಹೆಮ್ಮೆಯ ಸಂಗತಿ.

ವಿಜಯನಗರ ಸಾಮ್ರಾಜ್ಯದ ವೈಭವವನ್ನು ಕಂಡಿದ್ದ ಅಂದಿನ ಅನೇಕ ವಿದೇಶಿಗರು ಪುಸ್ತಕಗಳಲ್ಲಿ ದಾಖಲಿಸಿದ್ದಾರೆ. ಉತ್ಸವಗಳು ಕೇವಲ ಆಚರಣೆಗೆ ಸೀಮಿತಗೊಳ್ಳದೆ ಇತಿಹಾಸದ ಪುಟಗಳಲ್ಲಿ ದಾಖಲಾಗುವಂತೆ ಅರ್ಥಪೂರ್ಣ ಆಚರಣೆಗೆ ನಿಮ್ಮ ಅಮೂಲ್ಯ ಅಭಿಪ್ರಾಯಗಳನ್ನು ಬರೆದು ಹಂಪಿ ಟೈಮ್ಸ್‌ಗೆ ಕಳುಹಿಸಿಕೊಡಿ, ನಿಮ್ಮ ಆಯ್ದ ಅಭಿಪ್ರಾಯಗಳು, ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು.

ಹಂಪಿ ಉತ್ಸವ ಅರ್ಥಪೂರ್ಣ ಆಚರಣೆಗೆ ನಿಮ್ಮಅಮೂಲ್ಯ ಸಲಹೆ, ಅಭಿಪ್ರಾಯಗಳು ಜಿಲ್ಲಾಡಳಿತಕ್ಕೆ ಸಮಂಜಸವೆನಿಸಿದರೆ ಆಯ್ಕೆ ಮಾಡಿಕೊಳ್ಳಲುಬಹುದು. ಇಂದೇ ನಿಮ್ಮ ಅಭಿಪ್ರಾಯಗಳನ್ನು ಪತ್ರಿಕೆಯ ಇ-ಮೇಲ್ ಗೆ ಕಳುಹಿಸಿರಿ.



www.hampitimes.com
epaper.hampitimes.com
hampitimes@gmail.com
@hampitimes
9448633038

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಕನ್ನಡ ದಿನ ಪತ್ರಿಕೆ

ವಿಜಯನಗರ ಜಿಲ್ಲೆಯ ಸಮಗ್ರ ಸುದ್ದಿ, ವಿಜ್ಞಾನ, ವಿಶೇಷ ಲೇಖನಗಳನ್ನು ಓದಲಿಚ್ಚಿಸುವವರು ಈ ಕೆಳಗಿನ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ, ವಾಟ್ಸಪ್ ಗ್ರೂಪಿಗೆ ಜಾಯಿನ್ ಆಗಿ ಹಂಪಿ ಟೈಮ್ಸ್ ಇ-ಪತ್ರಿಕೆ ಓದಿರಿ.

Only Admins can Send Messages to this Group

Join with Us